
ಕರ್ನಾಟಕ ಆರ್ಯವೈಶ್ಯ ಮಹಾಸಭಾ(ರಿ)
16, ಶೇಷಾದ್ರಿ ರೋಡ್, ಗಾಂಧಿನಗರ, ಬೆಂಗಳೂರು – 560009
ದೂರವಾಣಿ – 080 22206151/52 ಈ–ಮೇಲ್– kavmss@gmail.com
ವೆಬ್‌ಸೈಟ್ – www.kavms.com

# ಸರ್ವ ಸದಸ್ಯರ ಸಭೆ

## ದಿನಾಂಕ: 16–11–2025



## ವಿಶ್ವ ಆರ್ಯವೈಶ್ಯ ಸಮಾವೇಶ

## Global Aryavysya Summit

2026ರ ಡಿಸೆಂಬರ್ 24 ರಿಂದ 27ರ ವರೆವಿಗೂ ಬೆಂಗಳೂರು

## 2024–2025 ಸಾಲಿನ ಲೆಕ್ಕಪತ್ರಗಳು ಮತ್ತು ಆಡಳಿತ ಮಂಡಳಿ ವರದಿ




2024- 25ರ ವಿದ್ಯಾರ್ಥಿಮಿತ್ರ ಲ್ಯಾಪ್‌ಟ್ಯಾಪ್ ಯೋಜನೆಯ ಫಲಾನುಭವಿಗಳು
ಮಹಾಸಭೆಯ ನಿರ್ದೇಶಕರೊಂದಿಗೆ



# ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿಯವರು

## ಶ್ರೀ ವಾಸವೀ ಪೀಠಂ

ನಂ 57, 11ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು -560003




ಮುಖ್ಯ ಅತಿಥಿಗಳಿಂದ ಗೌರವ ಸ್ವೀಕರಿಸಿದ ವಿದ್ಯಾಮಾಣಿಕ್ಯಗಳು

# ಕರ್ನಾಟಕ ಆರ್ಯವೈಶ್ಯ ಮಹಾಸಭಾ(ರಿ)

16, ಶೇಷಾದ್ರಿ ರೋಡ್, ಗಾಂಧೀನಗರ, ಬೆಂಗಳೂರು – 560009
ದೂರವಾಣಿ – 080 22206151/52 ಈ–ಮೇಲ್– kavmss@gmail.com ವೆಬ್‌ಸೈಟ್ – www.kavms.com


# ಸರ್ವಸದಸ್ಯರ ಸಭೆಯ ಸೂಚನಾ ಪತ್ರ

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಸರ್ವಸದಸ್ಯರ ಸಭೆಯನ್ನು ದಿನಾಂಕ: **16–11–2025ರ ಭಾನುವಾರ ಮಧ್ಯಾಹ್ನ 3.00 ಘಂಟೆಗೆ** ಮಹಾಸಭೆಯ ಅಧ್ಯಕ್ಷರಾದ ಶ್ರೀಯುತ ಆರ್ ಪಿ ರವಿಶಂಕರ್‌ರವರ ಅಧ್ಯಕ್ಷತೆಯಲ್ಲಿ ಗೇಟ್ ನಂಬರ್ 09 ಪ್ರಿನ್ಸೆಸ್ ಶ್ರೈನ್ ಅರಮನೆ ಮೈದಾನ, ಬೆಂಗಳೂರಿನಲ್ಲಿ ಕರೆಯಲಾಗಿದೆ.

## ಕಾರ್ಯಸೂಚಿ

1. ಪ್ರಾರ್ಥನೆ
2. ಸ್ವಾಗತ
3. ಸಭೆಯ ಸೂಚನಾ ಪತ್ರದ ಮಂಡನೆ ಹಾಗೂ ಅಂಗೀಕಾರ.
4. ಹಿಂದಿನ ಸರ್ವಸದಸ್ಯರ ಸಭೆಯ ನಡವಳಿಕೆಗಳ ಅನುಮೋದನೆ ಹಾಗೂ ಅಂಗೀಕಾರ.
5. 2024–25ನೇ ಸಾಲಿನ ಆಡಳಿತ ಮಂಡಳಿ ವರದಿ ಮಂಡನೆ ಮತ್ತು ಅನುಮೋದನೆ.
6. 2024–25ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ಹಾಗೂ ಲೆಕ್ಕ ಪರಿಶೋಧಕರ ವರದಿ ಮಂಡನೆ ಹಾಗೂ ಅನುಮೋದನೆ.
7. ಶ್ರೀ ವಾಸವಿ ಎಜುಕೇಶನ್ ಕೋ ಆಪರೇಟಿವ್ ಸೊಸೈಟಿ ನಿಯಮಿತದ ಅಭಿವೃದ್ಧಿ ಪಡೆಸುವ ಬಗ್ಗೆ.
8. ಆರ್ಯವೈಶ್ಯ ಸಮಾಜದ ಧ್ವಜ ನಿರ್ಮಾಣ ಬಗ್ಗೆ.
9. 2025–26ರ ಆರ್ಥಿಕ ವರ್ಷಕ್ಕೆ ಲೆಕ್ಕ ಪರಿಶೋಧಕರ ನೇಮಕ.
10. ಇತರೆ ವಿಷಯಗಳು ಅಧ್ಯಕ್ಷರ ಅಪ್ಪಣೆ ಮೇರೆಗೆ.
11. ಅಧ್ಯಕ್ಷರ ಭಾಷಣ.
12. ವಂದನಾರ್ಪಣೆ.

ವಂದನೆಗಳೊಂದಿಗೆ

**ಕೆ ಆರ್ ಕೃಷ್ಣ । ಹೆಚ್ ಜೆ ಹನುಮಂತಯ್ಯ**
ಪ್ರಧಾನ ಕಾರ್ಯದರ್ಶಿಗಳು

## ಸೂಚನೆ:

> ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸತಕ್ಕ ಯಾವುದೇ ವಿಷಯವಿದ್ದಲ್ಲಿ ಕನಿಷ್ಠ 7 ದಿನಗಳ ಮುಂಚಿತವಾಗಿ ಪತ್ರ ಮುಖೇನ ಕಳುಹಿಸುವುದು. ಆದ್ಯತೆ ಮೇರೆಗೆ ವಿಷಯವನ್ನು ತೆಗೆದುಕೊಳ್ಳಲಾಗುವುದು.

> ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

> ಆಡಳಿತ ಮಂಡಳಿ ವರದಿ ಹಾಗೂ ಆಡಿಟ್ ಆದ ಲೆಕ್ಕಪತ್ರಗಳನ್ನ 10–11–2025 ರ ನಂತರ ಮಹಾಸಭೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪಡೆಯಬಹುದು. ಸಹಕರಿಸಿ.

# ಕರ್ನಾಟಕ ಆರ್ಯವೈಶ್ಯ ಮಹಾಸಭಾ(ರಿ)

16, ಶೇಷಾದ್ರಿ ರೋಡ್, ಗಾಂಧೀನಗರ, ಬೆಂಗಳೂರು – 560009

## ನಡುವಳಿಕೆಗಳು

ದಿನಾಂಕ: 01–12–2024ರ ಭಾನುವಾರ ಮಧ್ಯಾಹ್ನ 3.00 ಘಂಟೆಗೆ ಬೆಂಗಳೂರಿನ ಮಲ್ಲೇಶ್ವರಂನ ಸರ್ಕಾರಿ ಪದವಿಪೂರ್ವ ಕಾಲೇಜಿನ ಮೈದಾನದಲ್ಲಿ ಮಹಾಸಭೆ ಅಧ್ಯಕ್ಷರಾದ ಶ್ರೀಯುತ ಆರ್ ಪಿ ರವಿಶಂಕರ್‌ರವರ ಅಧ್ಯಕ್ಷತೆಯಲ್ಲಿ, ನಡೆದ ಮಹಾಸಭೆಯ ಸಾಮಾನ್ಯ ಸರ್ವಸದಸ್ಯರ ಸಭೆಯ ನಡವಳಿಕೆಗಳು.

**1. ಪ್ರಾರ್ಥನೆ:**

ಶ್ರೀಮತಿ ತಾರಾ ಸುಬ್ರಮಣ್ಯರವರ ಪ್ರಾರ್ಥನೆಯೊಂದಿಗೆ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದವು.

**2 ಸ್ವಾಗತ:**

ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಕೋಶಾಧ್ಯಕ್ಷರಾದ ಶ್ರೀ ಎನ್‌ಎಸ್ ಶ್ರೀನಿವಾಸಮೂರ್ತಿಯವರು ಸಭೆಯಲ್ಲಿ ಹಾಜರಿದ್ದಎಲ್ಲಾ ಸದಸ್ಯರನ್ನು, ಪದಾಧಿಕಾರಿಗಳನ್ನು ಹಾಗೂ ಮಹಾಸಭೆಯ ಅಧ್ಯಕ್ಷರನ್ನು ಸ್ವಾಗತಿಸಿ ಸಭಾ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿರಲು ಕೋರಿದರು.

**3 ಸಭೆಯ ಸೂಚನಾ ಪತ್ರದ ಮಂಡನೆ ಹಾಗೂ ಅಂಗೀಕಾರ:**

ಬೆಂಗಳೂರು ವಿಭಾಗ ಕಾರ್ಯದರ್ಶಿಗಳಾದ ಶ್ರೀ ಪ್ರಸನ್ನಕುಮಾರ್‌ರವರು ಸಭೆಯ ಸೂಚನಾ ಪತ್ರವನ್ನು ಓದಿ, ಅನುಮೋದನೆ ಕೋರಿದರು.ಬೆಂಗಳೂರಿನ ಶ್ರೀ ನಾಗಶರಣ್ ಹಾಗೂ ಶ್ರೀ ತಿಪ್ಪೇಸ್ವಾಮಿ ಸೂಚನಾ ಪತ್ರವನ್ನು ಅನುಮೋದಿಸಿದ ನಂತರ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

**4. ಹಿಂದಿನ ಸರ್ವಸದಸ್ಯರ ಸಭೆಯ ನಡುವಳಿಕೆಗಳ ಅನುಮೋದನೆ ಹಾಗೂ ಅಂಗೀಕಾರ**

ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಎ ಅರ್ ರವಿಕುಮಾರ್ ಮಾತನಾಡಿ ಈಗಾಗಲೇ ಮಹಾಸಭೆ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿರುವ ಮತ್ತು ಲಭ್ಯವಿರುವ ವ್ಯಾಟ್ಸ್‌ಆ್ಯಪ್‌ಗಳಿಗೆ ಹಿಂದಿನ ಸಭೆಯ ನಡುವಳಿಕೆಯ ಪ್ರತಿಯನ್ನು ಕಳುಹಿಸಲಾಗಿದೆ. ಇಷ್ಟಲ್ಲದೇ, ಈ ಸಭೆಯಲ್ಲಿಯೂ ಸಹ ಮಾನ್ಯ ಸದಸ್ಯ–ರಿಗೆ ಇದರ ಪ್ರತಿಗಳನ್ನು ನೀಡಲಾಗಿದೆ.ಈ ಬಗ್ಗೆ ಯಾವುದೇ ಸದಸ್ಯರ ಪ್ರಶ್ನೆಗಳಿದ್ದಲ್ಲಿ ಸಮಂಜಸವಾದ ಉತ್ತರವನ್ನು ನೀಡಲಾಗುತ್ತದೆ ಎಂದು ಸಭೆಗೆ ತಿಳಿಸಿದರು. ಸದಸ್ಯರಾದ ಶ್ರೀ ಕೃಷ್ಣ ಶೆಟ್ಟಿ ಮತ್ತು ಶ್ರೀ ರವಿಪ್ರಸಾದ್ ಮಾತನಾಡಿ ಹಿಂದಿನ ಸಭೆಯ ನಡುವಳಿಕೆಗಳು ಸ್ಪಷ್ಟವಾಗಿ ಮೂಡಿಬಂದಿದೆ. ಬಹುಶಃ ಕೇಳುವ ಪ್ರಶ್ನೆ ಏನೂ ಇರುವುದಿಲ್ಲ ಸದರಿ ನಡುವಳಿಕೆಗಳನ್ನು ಅನುಮೋದಿಸಲು ನಾನು ಪ್ರಸ್ತಾವಿಸುತ್ತೇನೆಂದು ತಿಳಿಸಿದರು, ನಂತರ ಸಭೆಯು ಸರ್ವಾನುಮತದಿಂದ ಹಿಂದಿನ ಸಭೆಯ ನಡುವಳಿಕೆಗಳನ್ನು ಅಂಗೀಕರಿಸಿತು.

**5 2023–24ನೇ ಸಾಲಿನ ಆಡಳಿತ ಮಂಡಳಿ ವರದಿ ಮಂಡನೆ ಹಾಗೂ ಅಂಗೀಕಾರ:**

ಪ್ರಧಾನ ಕಾರ್ಯದರ್ಶಿ ಶ್ರೀ ಹೆಚ್‌ಜೆ ಹನುಮಂತಯ್ಯರವರು ಮಾತನಾಡಿ ಮಹಾಸಭೆ ಇಲ್ಲಿಯವರೆವಿಗೂ ಮಾಡಿರುವ ಕೆಲಸ, ಅಭಿವೃದ್ಧಿ ಕಾರ್ಯಗಳು, ಯೋಜನೆಗಳು, ವಿವಿಧ ಕಾರ್ಯಕ್ರಮಗಳ ಬಗ್ಗೆ ವಿಸ್ತೃತವಾದ ವರದಿಗಳನ್ನು ಸಭೆಯಲ್ಲಿ ಮಂಡಿಸಿ ಸಭೆಯ ಒಪ್ಪಿಗೆಯನ್ನು ಕೋರಿದರು. ಮಹಾಸಭೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದೆ. ಸಮಾಜದ ಬಂಧುಗಳ ಕಷ್ಟಗಳಿಗೆ ಸ್ಪಂದಿಸುತ್ತಿದೆ, ರಾಜ್ಯದ ದೊಡ್ಡದೊಡ್ಡ ಸಮಾಜದ ಬಂಧುಗಳು ಮಾಡುವ ಕೆಲಸಕ್ಕಿಂತ ವಿಭಿನ್ನವಾಗಿ

ಮಹಾಸಭೆ ಕಾರ್ಯನಿರ್ವಹಿಸುತ್ತಿದೆ. ಆಡಳಿತ ಮಂಡಳಿ ವರದಿಯು ಸ್ಪಷ್ಟವಾಗಿ ಮೂಡಿ ಬಂದಿದ್ದು ಸಭೆಯು ಆಡಳಿತ ಮಂಡಳಿ ವರಿದಿ ಒಪ್ಪಿ ಸಹಕರಿಸಬೇಕೆಂದು ಪ್ರಸ್ತಾಪಿಸಿದ್ದನ್ನು ಸದಸ್ಯರಾದ ಶ್ರೀ ಭೀಮಾರಾಜು ಮಿಡಿಗೇಶಿ ಹಾಗೂ ಶ್ರೀ ರಮೇಶ್ ಗುಪ್ತಾ ರವರು ಅನುಮೋದಿಸುವ ಮೂಲಕ ಸಭೆಯು ಸರ್ವಾನುಮತದಿಂದ 23–2024ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಅಂಗೀಕ–ರಿಸಿತು.

**6. 2023–24ನೇ ಸಾಲಿನ ಆಡಿಟ್ಆದ ಲೆಕ್ಕಪತ್ರಗಳ ಹಾಗೂ ಲೆಕ್ಕ ಪರಿಶೋಧಕರ ವರದಿ ಮಂಡನೆ ಮತ್ತುಅನುಮೋದನೆ:**

ಕೋಶಾಧ್ಯಕ್ಷರಾದ ಶ್ರೀ ಎನ್ಎಸ್ ಶ್ರೀನಿವಾಸ ಮೂರ್ತಿರವರು ಮಾತನಾಡಿ 2023–24ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ಪ್ರತಿಯನ್ನು ಮಹಾಸಭೆಯ ಸಾಮಾಜಿಕ ಜಾಲತಾಣಗಳ ಮೂಲಕ ಸದಸ್ಯರಿಗೆ ತಲುಪಿಸಲಾಗಿದೆ. ಇದರ ಬಗ್ಗೆ ಸ್ಪಷ್ಟನೆ ಬೇಕಾದಲ್ಲಿ ಕೇಳಬಹುದು ಎಂದು ಮಾಡಿದ ಮನವಿಗೆ ಸ್ಪಂದಿಸಿದ ಸದಸ್ಯರಾದ ಆರ್ ಜಿ ನಾಗೇಂದ್ರ ಪ್ರಕಾಶ್ ದಾವಣಗೆರೆಯವರು ಮಾತನಾಡಿ ಮಹಾಸಭೆಯ ವಾರ್ಷಿಕ ಲೆಕ್ಕಗಳು ಕನ್ನಡಿಯಂತೆ ಸ್ಪಷ್ಟವಾಗಿ ಮೂಡಿ ಬಂದಿದೆ. ಅದುದರಿಂದ 2023–2024ನೇ ಸಾಲಿನ ಲೆಕ್ಕಪತ್ರಗಳನ್ನು ಈ ಸಭೆಯಲ್ಲಿ ನಾನು ಪ್ರಸ್ತಾಪಿಸುತ್ತೇನೆ ಎಂದು ಮಾತನಾಡಿದ ನಂತರ ಸದಸ್ಯರಾದ ಶ್ರೀ ಗೋವಿಂದರಾಜು ಪಿ ಎನ್ರವರು ಅನುಮೋದಿಸಿ ಈ ಹಿನ್ನೆಲೆಯಲ್ಲಿ ಸಭೆ ಸರ್ವಾನುಮತದಿಂದ ಸಭೆ 2022–2023ನೇ ಸಾಲಿನ ಲೆಕ್ಕ ಪತ್ರಗಳನ್ನು ಅನುಮೋದಿಸಿತು.

**7. 2024–25ನೆ ಸಾಲಿನ ಲೆಕ್ಕ ಪರಿಶೋಧಕರ ನೇಮಕ:**

ಮಹಾಸಭೆಗೆ ಕಳೆದ 5 ವರ್ಷಗಳಿಂದ ಲೆಕ್ಕ ಪರಿಶೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಎಸ್.–ಎಸ್.ಬಿ ಅಸೋಸಿಯೇಟ್ಸ್ ಅತ್ಯುತ್ತಮವಾಗಿ ತಮ್ಮ ಕಾರ್ಯವನ್ನು ನಿರ್ವಹಿಸಿದೆ ಆದುದರಿಂದ 2024–25ನೇ ಸಾಲಿನ ಲೆಕ್ಕ ಪರಿಶೋಧಕರಾಗಿ ಎಸ್.ಎಸ್.ಬಿ ಅಸೋಸಿಯೇಟ್ಸ್ ಸಂಸ್ಥೆಯನ್ನೇ ನೇಮಿಸುವುದು ಮಹಾಸಭೆ ಹಿತದೃಷ್ಟಿಯಿಂದ ಒಳಿತೆಂದು ಅಧ್ಯಕ್ಷರು ಮಾಡಿದ ಮನವಿಯನ್ನು ಶ್ರೀ ನಾಗೇಶ್ವರು ಅನುಮೋದಿಸುವ ಮೂಲಕ ಸಭೆ ಸರ್ವಾನುಮತದಿಂದ ಅಂಗೀಕರಿಸಿತು. 2024–25ರ ಸಾಲಿನ ಲೆಕ್ಕ ಪರಿಶೋಧನೆಗೆ ಎಸ್ಎಸ್ ಬಿ ಅಸೋಸಿಯೇಟ್ಸ್ರವರನ್ನು ನೇಮಿಸಲು ತೀರ್ಮಾನಿಸಲಾಯಿತು.

**8. ಮಹಾಸಭೆ ಆಶ್ರಯದಲ್ಲಿ ಶಿಕ್ಷಣ ಸಹಕಾರ ಸಂಘ ಆರಂಭಿಸುವ ಬಗ್ಗೆ:**

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷರು ಶಿಕ್ಷಣದ ಪ್ರಾಮುಖ್ಯತೆಯ ಬಗ್ಗೆ ತಿಳಿಸುತ್ತಾ ಇಂದು ಶಿಕ್ಷಣ ಸಂಸ್ಥೆಗಳು ವ್ಯಾಪಾರಿ ಸಂಸ್ಥೆಗಳಾಗಿ ಮಧ್ಯಮ ಹಾಗು ಕೆಳ ವರ್ಗದ ಕುಟುಂಬ ವರ್ಗದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಿಸಲು ಆಗುತ್ತಿರುವ ಬವಣೆಗಳ ಬಗ್ಗೆ ಸಭೆಯ ಗಮನಕ್ಕೆ ತಂದು, ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆಗಳನ್ನು ರಾಜ್ಯದ ನಾನಾ ಭಾಗಗಳಲ್ಲಿ ಪ್ರಾರಂಭಿಸಬೇಕೆಂಬ ಅಪೇಕ್ಷೆ ಇದೆ. ಆದರೆ ಪ್ರತಿಯೊಂದು ಪ್ರದೇಶದಲ್ಲಿ ಶಿಕ್ಷಣ ಸಂಸ್ಥೆ ಪ್ರಾರಂಭಿಸಲು ಸ್ಥಳ, ಕಟ್ಟಡ, ಇತ್ಯಾದಿಗಳಿಗಾಗಿ ಕೋಟ್ಯಾಂತರ ರೂಪಾಯಿಗಳ ಅವಶ್ಯಕತೆ ಇರುತ್ತದೆ. ಕೇವಲ ವಂತಿಕೆಗಳನ್ನು ಸಂಗ್ರಹಿಸಿ ಶಾಲಾ ಕಟ್ಟಡವನ್ನುಕಟ್ಟಿ ಬೆಳೆಸಲು ಹೆಚ್ಚಿನ ಕಾಲವಕಾಶ ಬೇಕಾಗುತ್ತದೆ. ಇದರಿಂದ ಮಹಾಸಭೆ ಉದ್ದೇಶವು ಜಾಗ್ರತೆಯಾಗಿ ಈಡೇರಿರುವುದಿಲ್ಲ ಆದುದರಿಂದ ಮಹಾಸಭೆಯ ನೇತೃತ್ವದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಲುವಾಗಿ ಶಿಕ್ಷಣ ಸಹಕಾರ ಸಂಘವನ್ನು ಆರಂಭಿಸಿ ರಾಜ್ಯಾದ್ಯಂತ ನಾಗರೀಕ ಬಂಧುಗಳಿಂದ ಷೇರು ಮೊತ್ತವನ್ನು,

ವಂತಿಕೆಗಳನ್ನು ಕಡಿಮೆ ಕಾಲವಧಿಯಲ್ಲಿ ಸಂಗ್ರಹಿಸಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲುಆರಂಭಿಸಲು ಹಿಂದಿನ ಸರ್ವಸದಸ್ಯರ ಸಭೆಯ ತೀರ್ಮಾನದಂತೆ ಶ್ರೀವಾಸವಿ ಎಜ್ಯುಕೇಷನ್ ಕೋ ಆಪ್ ಸೊಸೈಟಿ ಎಂಬ ಸಹಕಾರ ಸಂಘವನ್ನು ದಿನಾಂಕ 15–5–2023ರಂದು ನೋಂದಣಿ ಮಾಡಲಾಗಿದೆ. ಈಗಾಗಲೇ ಸರಿಸುಮಾರು ರೂ.2.5 ಕೋಟಿಗಳಷ್ಟು ಹಣವನ್ನು ಸಂಗ್ರಹಿಸಲಾಗಿದ್ದು, ರಾಜ್ಯಾದ್ಯಂತ ಇರುವ ನಮ್ಮ ಸದಸ್ಯ ಬಂಧುಗಳು ಹೊಸ ಸದಸ್ಯರ ನೋಂದಾವಣೆ ಮಾಡಿಕೊಡಲು ಸಹಕ–ರಿಸಬೇಕೆಂದು ಮನವಿ ಮಾಡಿದರು.

**9. ಇತರ ವಿಷಯಗಳು ಅಧ್ಯಕ್ಷರ ಅಪ್ಪಣೆ ಮೇರೆಗೆ.**

**10. ಅಧ್ಯಕ್ಷರ ಭಾಷಣ:**

ಅಧ್ಯಕ್ಷರಾದ ಶ್ರೀ ಆರ್.ಪಿ. ರವಿಶಂಕರ್‌ರವರು ಈ ಸಂದರ್ಭದಲ್ಲಿ ಮಾತನಾಡಿ ಮಹಾಸಭೆಯ ಪ್ರತಿಯೊಂದು ಕಾರ್ಯಕ್ರಮಗಳು ಕಾಲ ಮಿತಿಯೊಳಗೆ ನಡೆದು ಅವಶ್ಯವಿರುವ ಕುಟುಂಬಗಳಿಗೆ ಸಹಾಯ ತಲುಪಲು ಮತ್ತು ಮಹಾಸಭೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಸಹಕರಿಸುತ್ತಿರುವ ಕಾರ್ಯಕಾರಿ ಸಮಿತಿ ಸದಸ್ಯರು, ಜಿಲ್ಲಾ ಸಮಿತಿ ಸದಸ್ಯರನ್ನು ಸಾಮಾನ್ಯ ಸದಸ್ಯರನ್ನು ಹಾಗೂ ಆಡಳಿತ ಮಂಡಳಿಯ ನಿರ್ದೇಶನಗಳನ್ನು ಕಾಲಕಾಲಕ್ಕೆ ಅನುಷ್ಠಾನಗೊಳಿಸಿ ಮಹಾಸಭೆಯ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸುತ್ತಿರುವ ನಮ್ಮ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಮತ್ತು ಮಹಾಸಭೆಯ ಅಭಿವೃದ್ಧಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬರನ್ನು ಅಭಿನಂದಿಸಿದರು.

**11. ವಂದನಾರ್ಪಣೆ :**

ಶ್ರೀಮತಿ ಗೌರವ ಸುಧಾ ಮುರಳಿ ವಂದನಾರ್ಪಣೆಯೊಂದಿಗೆ ಕಾರ್ಯಕಲಾಪಗಳು ಮುಕ್ತಾಯಗೊಂಡಿತು

# ಆಡಳಿತ ಮಂಡಳಿ ವರದಿ 2024-2025

**ಬದುಕಿನಲ್ಲಿ ಬೆಳಕು ಹುಡುಕುವ ಬದಲು**
**ನೀನೇ ಬೆಳಕಿನ ಕಿರಣವಾಗಿ ರೂಪುಗೊಂಡು**
**ನೊಂದವರ ಪಾಲಿನ ನಂದಾದೀಪವಾಗಿ**
**ಮನೆ, ಮನಗಳ ಮೇಲೆ ಬೆಳಕ ಚೆಲ್ಲು**
**ಆರದೇ ಉರಿಯಲಿ ಮಾನವೀಯತೆಯ ಜ್ಯೋತಿ.**

ಯಾವುದೇ ಫಲಾಪೇಕ್ಷೆ ಬಯಸದೇ ಸಮಾಜಕ್ಕಾಗಿ ನಾವು ಮಾಡುವ ಉತ್ತಮ ಕಾರ್ಯಗಳು ನಮಗೆ ತಿಳಿಯದಂತೆ ನಮ್ಮನ್ನು ಉನ್ನತ ಸ್ಥಾನಕ್ಕೆ ಕೊಂಡ್ಯೊಯುತ್ತದೆ.**'ಪ್ರಯತ್ನಂ ಸರ್ವ ಸಿದ್ಧಿ ಸಾಧನಂ'** ಎಂಬಂತೆ ನಿರಂತರ 118 ವರ್ಷಗಳಿಂದ ಸಮಾಜ ಮುಖಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಆರ್ಯವೈಶ್ಯ ಮಹಾಸಭೆಯು ಕರ್ನಾಟಕ ರಾಜ್ಯದ ಆರ್ಯವೈಶ್ಯ ಬಂಧುಗಳ ನೆಚ್ಚಿನ, ಮೆಚ್ಚಿನ ಸಂಸ್ಥೆಯಾಗಿ, ಜನತೆಯ ಆಶೋತ್ತರಗಳಿಗೆ ಸ್ಪಂದಿಸುತ್ತಾ, ಅವರ ಕಷ್ಟ ಕಾರ್ಪಣ್ಯಗಳಿಗೆ ಸಹಾಯ ಹಸ್ತ ನೀಡುತ್ತಾ, **ನೊಂದ ಹೃದಯಗಳ ಸಂಜೀವಿನಿಯಾಗಿ** ಸಾವಿರಾರು ಕುಟುಂಬಗಳ ನೆಮ್ಮದಿಗೆ ಆಸರೆಯಾಗಿ ಆರ್ಯವೈಶ್ಯ ಬಂಧುಗಳ ಹೃದಯ ಸಿಂಹಾಸನದಲ್ಲಿ ಬೆಳಗುತ್ತಿದೆ.

**ಒಳ್ಳೆಯದನ್ನು ಹೊತ್ತು, ಕೆಟ್ಟದ್ದನ್ನು ಕೈ ಬಿಟ್ಟು ಮುನ್ನಡೆಯುವುದೇ ನಿಜವಾದ ಸಮಾಜ ಸುಧಾರಣೆಯ ಲಕ್ಷಣ, ಶೋಷಣೆಗೆ ಒಳಗಾದವರಿಗೆ ಪೋಷಣೆ ನೀಡುವ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕು** ಎಂಬ ತತ್ವ ನಿಷ್ಠೆಯಿಂದ ಶಿಕ್ಷಣ, ಆರೋಗ್ಯ, ಸಾಮಾಜಿಕ ಸೇವಾ ಕ್ಷೇತ್ರಗಳಲ್ಲಿ ತನ್ನ ಸೇವಾ ಕದಂಬ ಬಾಹುಗಳನ್ನು ವಿಸ್ತರಿಸಿ ಜನ ಸೇವೆಯೇ ಜನಾರ್ಧನ ಸೇವೆ ಎಂಬಂತೆ ಕಾರ್ಯನಿರ್ವಹಿಸಿ ಪ್ರತೀ ತಿಂಗಳಲ್ಲಿ ಸಾವಿರಾರು ಕುಟುಂಬಗಳಿಗೆ ಸೇವೆ ನೀಡುವ ಮೂಲಕ ಅವರ ಮುಖದಲ್ಲಿ ಮಂದಹಾಸ ಮೂಡಿಸಿದೆ, ಸ್ವಾಭಿಮಾನದ ಜೀವನವನ್ನು ನೀಡಿದೆ. ಇಂದು ಕರ್ನಾಟಕ ರಾಜ್ಯದ ಆರ್ಯವೈಶ್ಯ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಕಾಯಾ-ವಾಚಾ-ಮನಸಾ ಕಾರ್ಯನಿರ್ವಹಿಸುತ್ತಿರುವ ನಮ್ಮ ಮಾತೃ ಸಂಸ್ಥೆ 2024-25ರ ಸಾಲಿನಲ್ಲಿ ಮಾಡಿರುವ ಚಟುವಟಿಕೆಗಳ ವಾರ್ಷಿಕ ವರದಿಯನ್ನು ತಮ್ಮ ಹೃದಯ ಕಮಲಗಳಿಗೆ ಸಮರ್ಪಿಸಲು ಅತೀವ ಸಂತೋಷವಾಗುತ್ತದೆ.

**ಯಾರು ಕೇವಲ ತನ್ನ ನೋವುಗಳನ್ನು ಅಪ್ಪಿಕೊಂಡು ಬದುಕುವರೋ ಅವರು ದುರ್ಬಲರಾಗುತ್ತಾರೆ ಆದರೆ ಯಾವ ವ್ಯಕ್ತಿ ಇಡೀ ಸಮಾಜದ ನೋವುಗಳನ್ನು ತನ್ನ ಹೃದಯಕ್ಕೆ ಅಂಟಿಸಿಕೊಂಡು ಬದುಕುವನೋ ಅವನು ಶಕ್ತಿಶಾಲಿ ಆಗುತ್ತಾನೆ ಕೇವಲ ನಮ್ಮ ನೋವಿನ ಬಗ್ಗೆ ಯೋಚಿಸುವುದು ದುಷ್ಕರ್ಮವಾಗುತ್ತದೆ ಆದರೆ ಇಡೀ ಸಮಾಜದ ನೋವಿಗೆ ಪರಿಹಾರ ಹುಡುಕುವುದು ಸತ್ಕರ್ಮವಾಗುತ್ತದೆ.**

# ವಿಶ್ವ ಆರ್ಯವೈಶ್ಯ ಸಮಾವೇಶ
# Global Aryavysya Summit

ವೇದಗಳ ಕಾಲದಿಂದಲೂ ಸಮಾಜಮುಖಿಯಾಗಿ, ಲೋಕಪ್ರಾಯವಾಗಿರುವ ವೈಶ್ಯ ಸಮಾಜಕ್ಕೆ ಒಂದು ಭವ್ಯವಾದ ಇತಿಹಾಸವಿದೆ. **ಶೆಟ್ಟಿ ಇದ್ದಲ್ಲಿ ಪಟ್ಟಣ ಎದ್ದಿತು** ಎನ್ನುವ ನಾಣ್ಣುಡಿಯಂತೆ ನಮ್ಮ ಬಂಧುಗಳು **ಭೂಮಿಯ ಯಾವುದೇ ಭಾಗದಲ್ಲಿದ್ದರೂ ಅವರು ಭೂಮಿಗೆ ಬಾರವಾಗದೆ, ಭೂರಮೆಗೆ ಶೃಂಗಾರವಾಗಿ, ಸಮಾಜದ ಆಸ್ತಿಯಾಗಿ, ದೇಶದ ಶಕ್ತಿಯಾಗಿ** ಬೆಳೆದು ಬಂದಿರುವ ಹೃದಯ ಶ್ರೀಮಂತಿಕೆಯ ಸರದಾರರಾಗಿ ಬೆಳೆದಿದ್ದಾರೆ. ವ್ಯಾಪಾರೋದ್ಯಮಗಳಿಗೆ ಸೀಮಿತವಾಗಿದ್ದ ಸಮಾಜದ ಯುವ ಜನತೆ ಇಂದು ಶೈಕ್ಷಣಿಕ ಕ್ಷೇತ್ರದಲ್ಲಿಯೂ ಮಹತ್ತರ ಸಾಧನೆಗಳನ್ನು ಮಾಡುತ್ತಾ ದೇಶ ವಿದೇಶಗಳಲ್ಲಿ ಉನ್ನತವಾದ ಸ್ಥಾನಗಳನ್ನು ಅಲಂಕರಿಸುತ್ತಾ ಬಂದಿರುವುದುನ್ನು ಕಾಣುತ್ತಿದ್ದೇವೆ. ಆದರೆ **ಆರ್ಯವೈಶ್ಯ ಜನತೆಗೆ ರಕ್ತಗತವಾಗಿ ಬಂದಿರುವ ವ್ಯಾಪಾರೋದ್ಯಮಗಳನ್ನು ಕಾಲಮಾನಕ್ಕೆ ತಕ್ಕಂತೆ ಅಭಿವೃದ್ಧಿ ಪಡಿಸುವುದು/ನವೋದ್ಯಮಗಳನ್ನು ಆರಂಭಿಸುವ ಬಗ್ಗೆ ಚಿಂತನೆ ನಡೆಸದೆ ವ್ಯಾಪಾರ ವ್ಯವಹಾರಗಳಿಂದ ವಿಮುಕ್ತರಾಗುತ್ತಿರುವುದು... ಕೆಲಸ ಕೊಡುತ್ತಿದ್ದ ಸಮಾಜದ ಯುವಪೀಳಿಗೆ ಕೆಲಸಗಳನ್ನು ಅರಸುತ್ತಾ ಸಾಗಿರುವುದು ಆತಂಕದ ವಿಚಾರವಲ್ಲವೇ?** ಅತಿವೃಷ್ಟಿ, ಅನಾವೃಷ್ಟಿ, ನೈಸರ್ಗಿಕ ವಿಕೋಪಗಳಂತಹ ಸಂದರ್ಭದಲ್ಲಿಯೂ ಸಾಹಸ ಮೆರೆದು, ಪರಿಸ್ಥಿತಿಯ ಸವಾಲುಗಳನ್ನು ದಿಟ್ಟವಾಗಿ ಎದುರಿಸಿ ಲೋಕಮಾನ್ಯರಾಗಿದ್ದ ಸಮಾಜದ ಯುವಶಕ್ತಿ ವ್ಯಾಪಾರೋದ್ಯಗಳ ಜಾಗತಿಕ ಸವಾಲುಗಳನ್ನು ಸ್ವೀಕರಿಸಿ, ಮೆಟ್ಟಿ ನಿಂತು ಉದ್ಯಮಗಳಲ್ಲಿ ಸಾಧಕರಾದಲ್ಲಿ ಮಾತ್ರ ಆರ್ಯವೈಶ್ಯ ಸಮಾಜದ ವಂಶವಾಹಿನಿಯ ಗೌರವ ಉತ್ತುಂಗಕ್ಕೇರುತ್ತದೆ.

ಇಡೀ ಮಾನವ ಕುಲದ ಚರಿತ್ರೆಯನ್ನು ಅವಲೋಕಿಸಿದರೆ, ಇಂದು ಇರುವಷ್ಟು ಅವಕಾಶಗಳು ಹಿಂದೆಂದೂ ಇರಲಿಲ್ಲ. **ಹಿಂದಿನ ಇಪ್ಪತ್ತು ಶತಮಾನಗಳ ಮಾನವ ವಿಕಾಸದ ಚರಿತ್ರೆಯಲಿ ಹಿಂದೆಂದು ಸಾಧ್ಯವಾಗದಂತಹ ತಂತ್ರಜ್ಞಾನ ಹಾಗೂ ಅವಿಷ್ಕಾರಗಳನ್ನು 21 ಶತಮಾನವು ವಿಶ್ವದ ಮುಂದಿಟ್ಟಿದೆ,** ಮಾನವನ ಸಾಮರ್ಥ್ಯ ಅದ್ಭುತವಾಗಿ ಬೆಳೆಯುತ್ತಿದೆ. ನಾಗಾಲೋಟದಲ್ಲಿ ಸಾಗುತ್ತಿರುವ ಜಾಗತಿಕ ಪ್ರಪಂಚದಲ್ಲಿ ನಾವು ಮತ್ತಷ್ಟು ಜಾಗೃತರಾಗಬೇಕು, ಕ್ರಿಯಾಶೀಲರಾಗಬೇಕು, ಸಾಧನೆಯ ಬೆನ್ನತ್ತಿ, ಛಲದಿಂದ ಸಾಧಿಸಿ ಛಲದಂಕ ಮಲ್ಲರಾಗಿ ವಿಶ್ವವೇ ನಿಮ್ಮತ್ತ ನೋಡುವಂತಹ ಅಸಾಧರಣಾ ಪ್ರತಿಭೆಗಳಾಗಿ ಹೊರಹೊಮ್ಮಬೇಕು. ಜೀವನದಲ್ಲಿ ಅಂತಹ ಯಶಸ್ಸು ಪಡೆದು ಫಲಗಳನ್ನು ಪಡೆಯಲು ಮೂರು ಬಲಶಾಲಿ ಮಂತ್ರಗಳನ್ನು ಅರಿತುಕೊಂಡು ಅನುಷ್ಠಾನ ಮಾಡಬೇಕು. ಅಂತಹ ದಿವ್ಯ ಮಂತ್ರಗಳು ಎಂದರೇ ಬಯಕೆ–ನಂಬಿಕೆ–ನಿರೀಕ್ಷೆಗಳು. **ನಿದ್ರಿಸಲೂ ಬಿಡದಂತಹ ಕನಸುಗಳು ನಿಮ್ಮದಾಗಬೇಕು. ಕನಸುಗಳನ್ನು ಸಾಕಾರಗೊಳಿಸಲು ಸದಾ ಜಾಗೃತರಾಗಿರಬೇಕು**. ದೃಢಸಂಕಲ್ಪ ಪರಿಸ್ಥಿತಿಗಳನ್ನು ನಿಭಾಯಿಸುವ ಕಲೆಯನ್ನು ಕರಗತ ಮಾಡಿಕೊಳ್ಳಬೇಕು. ದೃಢಸಂಕಲ್ಪ ಎಂಬುದು ಮನಃಶಕ್ತಿಯನ್ನು ವೃದ್ಧಿಗೊಳಿಸುತ್ತದೆ, ಮನಃಶಕ್ತಿಯು ಯಶಸ್ಸಿಗೆ ಆಧಾರವಾಗಿರುತ್ತದೆ. ಯುವ ಮಿತ್ರರೇ, **ಗೆಲುವಿಗಾಗಿ ದುಡಿಯುವಂತಹ ಮನುಷ್ಯರಾಗಬೇಡಿ,** ಮೌಲ್ಯಕ್ಕಾಗಿ ಹೋರಾಡುವಂತಹ ಶಕ್ತಿಗಳು ನೀವಾಗಬೇಕು, ಗೆಲುವು ತಂತಾನೇ ನಿಮ್ಮ ಮುಂದೆ ಪ್ರತ್ಯಕ್ಷವಾಗುತ್ತದೆ. ನಾವು ಪ್ರಪಂಚದ ಎದುರು ಸಮರ್ಥವಾಗಿ ನಿಲ್ಲದ ಹೊರತು ಯಾರು ನಮ್ಮನ್ನು ಗೌರವಿಸಲಾರರು. **ಸಾಧನೆಯ ಹಾದಿಯಲ್ಲಿ ಭಯಕ್ಕೆ ಜಾಗವಿರಬಾರದು. ಶಕ್ತಿ–ಶಕ್ತಿಯನ್ನು ಮಾತ್ರ ಗೌರವಿಸುತ್ತದೆ**. ನಮ್ಮ ಅಭಿವೃದ್ಧಿಯ ಶಿಲ್ಪಿಗಳು ನಾವೇ ಆಗಬೇಕು. ನಮ್ಮ ಪ್ರತಿಯೊಂದು ಆಲೋಚನೆ, ಭಾವನೆ, ಬಯಕೆ, ಕ್ರಿಯೆಯು

ಶಕ್ತಿಯೊಂದನ್ನು ಸೃಷ್ಟಿಸುತ್ತದೆ. ಒಳಿತು–ಕೆಡುಕುಗಳು ನಮ್ಮನ್ನು ಭಾದಿಸುವುದು ಹಾಗೂ ಅದರ ಅನುಭವಗಳು ನಮ್ಮಲ್ಲೇ ಉಳಿಯುವುದು. ನಾವು ಅವುಗಳ ಸಮತೋಲನ ಕಾಪಾಡಿಕೊಂಡು ಸಾಧನೆಯ ಹಾದಿಯಲ್ಲಿ ಸ್ಪಷ್ಟವಾದ, ದಿಟ್ಟವಾದ ಹೆಜ್ಜೆಗಳನ್ನಿಡಬೇಕು. **ಗುರಿ ಮುಟ್ಟುವವರೆವಿಗೂ ಯಾವುದೇ ರಾಜಿಯಿಲ್ಲ, ಹೊಂದಾಣಿಕೆ ಇರಬಾರದು.** ಸೃಷ್ಟಿಯ ಅದ್ಬುತ ನೀವು, ಸದೃಡ ಭಾರತ ನಿರ್ಮಾಣದತ್ತ ಮುಖಮಾಡಿ. **ವಿಸ್ಮಯಗಳು– ನಾಗಾಲೋಟದಲ್ಲಿ ಬೆಳೆಯುತ್ತಿರುವ ಉದ್ಯಮ ಪ್ರಪಂಚ ಭೂಮಿಯ ಯಾವುದೇ ಭಾಗದಲ್ಲಿದ್ದರು ವಿಶ್ವವ್ಯಾಪ್ತಿಯಾಗಿ ವ್ಯಾಪಾರೋದ್ಯಮಗಳನ್ನು ಬೆಳೆಸಿ, ಸಾವಿರ–ಸಾವಿರ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯ ಮತ್ತು ಹೊಸ ಅನ್ವೇಷಣೆಗಳ ಬಗ್ಗೆ ದೇಶದ ಭವಿಷ್ಯದ ಬೆನ್ನೆಲುಬಾಗಿರುವ ಯುವ ಪೀಳಿಗೆಗೆ ಮಾರ್ಗದರ್ಶನ, ಸಲಹೆ, ಸಹಕಾರ, ತಂತ್ರಜ್ಞಾನದ ಅರಿವು, ಮಾರುಕಟ್ಟೆ ಬೆಳೆಸುವ ಕಲೆ, ಆಮದು–ರಫ್ತು ವ್ಯಾಪಾರಗಳು ಇತ್ಯಾದಿ–ಇತ್ಯಾದಿಗಳ ಬಗ್ಗೆ ಸಮಗ್ರ ಮಾಹಿತಿ ನೀಡುವ ಮತ್ತು ಆರ್ಯವೈಶ್ಯ ಸಮಾಜ ಭವ್ಯ ಇತಿಹಾಸ, ಸಮಾಜದಲ್ಲಿ ನಾನಾ ರಂಗಗಳಲ್ಲಿ ಯಶಸ್ಸು ಸಾಧಿಸಿರುವ ಅತಿರಥ ಮಹಾರಥರ ಬಗ್ಗೆ ವಿಸ್ತಾರವಾದ ಮಾಹಿತಿಗಳೊಂದಿಗೆ ನವ ಪೀಳಿಗೆಗೆ ಅವರನ್ನು ಪರಿಚಯಿಸುವಂತಹ ವಿಶೇಷ ವೇದಿಕೆ ನಿರ್ಮಾಣ ಮಾಡಿ ನಮ್ಮ ಯುವ ಜನತೆಯನ್ನು ಜಾಗತಿಕ ಪ್ರಪಂಚಕ್ಕೆ ಕರೆದೊಯ್ಯುವಂತಹ ಒಂದು ಸಾಹಸಕ್ಕೆ ಕರ್ನಾಟಕ ಆರ್ಯವೈಶ್ಯ ಮಹಾಸಭೆ ಮುಂದಡಿ ಇಟ್ಟಿದೆ. 2026ರ ಡಿಸೆಂಬರ್ 24 ರಿಂದ 27ರ ವರೆವಿಗೂ ಬೆಂಗಳೂರು ನಗರದ ಅರಮನೆ ಮೈದಾನದಲ್ಲಿ ವಿಶ್ವ ಆರ್ಯವೈಶ್ಯ ಸಮಾವೇಶ ಆಯೋಜಿಸಲು ಕಾರ್ಯ ಪ್ರವೃತ್ತರಾಗಿದ್ದೇವೆಂದು ತಿಳಿಸಲು ಬಹಳ ಸಂತೋಷವಾಗುತ್ತದೆ.**



ಇದು ಭಾಷಣಗಳ ಸಮಾವೇಶವಲ್ಲ ನಿಮ್ಮ ಭವಿಷ್ಯ ರೂಪಿಸುವ ಸಮಾವೇಶ. ಇದು ಕೇವಲ ಸಾಧಕರ ಪರಿಚಯ ಮಾಡುವ ವೇದಿಕೆಯಲ್ಲ– ಇನ್ನಷ್ಟು ಸಾಧಕರನ್ನು ಸೃಷ್ಟಿಸುವ ವೇದಿಕೆ. ಜ್ಞಾನ–ವಿಜ್ಞಾನ–ಸುಜ್ಞಾನ–ತಂತ್ರಜ್ಞಾನ–ಅನ್ವೇಷಣೆ–ಆವಿಷ್ಕಾರಗಳ ಬಗ್ಗೆ ಮಾಹಿತಿಗಳ ಹೊಳೆಹರಿಸಿ, ನಿಮ್ಮ ಆತ್ಮವಿಶ್ವಾಸಕ್ಕೆ ಮತ್ತಷ್ಟು ಸ್ಪೂರ್ತಿ ಚೈತನ್ಯಗಳನ್ನು ತುಂಬಿ ವಿಶ್ವ ಮಾರುಕಟ್ಟೆಗೆ ನಿಮ್ಮನ್ನು ಪರಿಚಯಿಸುವ ಮಹತ್ವಾಕಾಂಕ್ಷಿ ಯೋಜನೆ–ಯೋಚನೆ ಮಹಾಸಭೆಯದ್ದು. ಆಲೋಚನೆಗಳು ಸಾಕಾರವಾಗಿ

ಸಮರ್ಪಕವಾದ ಗುರಿಮುಟ್ಟಲು ತಮ್ಮಗಳ ಪರಿಪೂರ್ಣ ಸಹಕಾರ ಸರ್ವರೀತಿಯಿಂದಲೂ ಅತ್ಯವಶ್ಯ. 2026 ಡಿಸೆಂಬರ್ 24 ರಿಂದ 27 ರವರೆವಿಗೂ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಶ್ರಯದಲ್ಲಿ ನಡೆಸಲು ಉದ್ದೇಶಿಸಿರುವ ವಿಶ್ವ ಆರ್ಯವೈಶ್ಯ ಸಮಾವೇಶದ ಪೂರ್ವ ಸಿದ್ಧತೆಗಳ ಬಗ್ಗೆ ಬೆಂಗಳೂರು ನಗರದ ಪ್ರತಿಷ್ಠಿತ ಉದ್ಯಮಿಗಳು, ಕೈಗಾರಿಕೋದ್ಯಮಿಗಳು, ವೃತ್ತಿಪರರು, ಇನ್ನೂ ಹಲವು ಕ್ಷೇತ್ರಗಳ ಪ್ರತಿಷ್ಠಿತರೊಂದಿಗೆ ದಿನಾಂಕ: 3–8–2025ರಂದು ಮಹಾಸಭೆಯ ಆವರಣದಲ್ಲಿರುವ ಬ್ಯಾಂಕ್ವೆಟ್ ಹಾಲ್‌ನಲ್ಲಿ ಚಿಂತನ–ಮಂಥನ ಸಭೆಯನ್ನು ನಡೆಸಲಾಯಿತು.

ವಿವಿಧ ವ್ಯಾಪಾರ, ವ್ಯವಹಾರ, ಉದ್ಯಮಗಳ 150ಕ್ಕೂ ಹೆಚ್ಚು ಪ್ರತಿಷ್ಠಿತರು ಸಭೆಯಲ್ಲಿ ಪಾಲ್ಗೊಂಡಿದ್ದು **GLOBAL ARYAVYSYA SUMMIT** ಆಲೋಚನೆಯ ಬಗ್ಗೆ ಅತೀವ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಲ್ಲದೆ ಪರಿಪೂರ್ಣ ಸಹಕಾರವನ್ನು ನೀಡುವುದಾಗಿ ತಿಳಿಸಿದರು.

ಹಣ ಮಾಡಲು ಆರೋಗ್ಯ ಕಳೆದುಕೊಳ್ಳುತ್ತೇವೆ, ಆರೋಗ್ಯ ಪಡೆಯಲು ಹಣ ಕಳೆದುಕೊಳ್ಳುತ್ತೇವೆ.
ಸಾವೇ ಇಲ್ಲವೆಂಬಂತೆ ಬದುಕುತ್ತೇವೆ, ಸಾಯುವಾಗ ನಾವು ಬದುಕಿಯೇ ಇಲ್ಲವೆಂಬಂತೆ ಸಾಯುತ್ತೇವೆ.
ಇಷ್ಟೇ ಜೀವನ

# ಸಾವಿಗೆ ಸಮಯವಿಲ್ಲ ಸಾಧನೆಗೆ ಸಾವಿಲ್ಲ

ಕೊನೆಗೊಂದು ದಿನ ಎಲ್ಲವೂ ಮೌನ, ಕೋಪ ತಾಪಗಳನ್ನು ಇಲ್ಲೇ ಬಿಟ್ಟು ಆಸ್ತಿ ಅಂತಸ್ತುಗಳನ್ನು ಕುಟುಂಬದವರಿಗೆ ಕೊಟ್ಟು, ದ್ವೇಷವನ್ನು ಬೂದಿಯಲ್ಲಿ ಸುಟ್ಟು, ನಿನ್ನವರು ಕಳುಹಿಸುವವರು ಕಣ್ಣೀರುಟ್ಟು. ಸಾವಿನ ನಂತರವೂ ಭೂಮಿಯ ಮೇಲೆ ಉಳಿಯುವುದು ನಾವು ಮಾಡುವ ಸತ್ಕಾರ್ಯಗಳು ಮಾತ್ರ. ಅಂತಹ ವೈಶಿಷ್ಟ್ಯ ಪೂರ್ಣ ಹೃದಯಸ್ಪರ್ಶಿ ಕೆಲಸಗಳನ್ನು ಮಹಾಸಭೆ ಅತ್ಯಂತ ಮಾನವೀಯ ಮೌಲ್ಯಗಳೊಂದಿಗೆ ನಿರ್ವಹಿಸಿದೆ, ನಿರ್ವಹಿಸುತ್ತಾ ಬರುತ್ತಿದೆ.

## ವೈಶಿಷ್ಟ್ಯ ಪೂರ್ಣ ಯೋಜನೆಗಳು




### ವಾಸವಿ ಚೇತನ

ಬಾಲ್ಯದಿಂದಲೇ ಅಂಗವಿಕಲರಾಗಿ ಆರ್ಥಿಕ ಸಂಕಷ್ಟದಲ್ಲಿರುವ ಅಂಗವಿಕಲ ಹಿರಿಯ ನಾಗರೀಕರಿಗೆ ಅಜೀವ ಪರ್ಯಂತ ರೂ. 1,000/–ಗಳ ಮಾಸಿಕ ವೇತನ ನೀಡುವ ವೈಶಿಷ್ಟ್ಯ ಪೂರ್ಣ ಯೋಜನೆ **ವಾಸವಿ ಚೇತನ**. 2018ರಲ್ಲಿ ಪ್ರಾರಂಭವಾದ ಈ ಯೋಜನೆ, ಇಲ್ಲಿಯವರೆಗೆ ಸುಮಾರು 210 ಅಂಗವಿಕಲರಿಗೆ ಶಕ್ತಿಯಾಗಿದೆ

**ವಾಸವಿ ಚೇತನ (ವಿಶೇಷಚೇತನ) 2024–25ನೇ ಸಾಲಿನ ಫಲಾನುಭವಿಗಳ ಪಟ್ಟಿ**

| ಫಲಾನುಭವಿಯ ಹೆಸರು | ಊರು | ಜಿಲ್ಲೆ |
|---|---|---|
| ಸುಕನ್ಯ | ರಾಜಾಜಿ ನಗರ | ಬೆಂಗಳೂರು |
| ಉಮಾ ಅರ್ | ಕೊಳ್ಳೇಗಾಲ | ಚಾಮರಾಜನಗರ |
| ಗೋವಿಂದರಾಜು ಜಿ ಡಿ | ಬಾಗೇಪಲ್ಲಿ | ಚಿಕ್ಕಬಳ್ಳಾಪುರ |
| ಪರಮೇಶ್ವರ ಗುಪ್ತ ಜಿ ಎನ್ | ಚಿಂತಾಮಣಿ | ಚಿಕ್ಕಬಳ್ಳಾಪುರ |
| ಸತ್ಯನಾರಾಯಣ ಶೆಟ್ಟಿ ಪಿ | ಚಿಂತಾಮಣಿ | ಚಿಕ್ಕಬಳ್ಳಾಪುರ |
| ಸತ್ಯಮಯ್ಯ ವಿ | ಸಿಂಗಾರಹಳ್ಳಿ | ಬೆಂಗಳೂರು ಗ್ರಾಮಾಂತರ |

## ವೈಶ್ಯಾ ಹಾಸ್ಟೆಲ್, ಬೆಂಗಳೂರು



ಉನ್ನತ ಶಿಕ್ಷಣದ ಕನಸನ್ನು ಹೊಂದಿ, ಬೆಂಗಳೂರು ನಗರಕ್ಕೆ ಆಗಮಿಸಿದಂತಹ ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟೋಪಚಾರ ಸೌಲಭ್ಯವನ್ನು ನೀಡುವ ಪರಂಪರೆಯನ್ನು ಹೊಂದಿರುವ ನಮ್ಮ ಹಾಸ್ಟೆಲ್‌ನಲ್ಲಿ ಪ್ರಸ್ತುತ 120 ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದಾರೆ.

## ವಾಸವಿ ಭವನ, ಮೈಸೂರು


**ಚೌದರಿ ಅಪ್ಪಾಜಯ್ಯ ಶೆಟ್ಟರ ಧರ್ಮ ಛತ್ರ ಇವರ ಸಹಕಾರದೊಂದಿಗೆ ಮೈಸೂರು ನಗರದಲ್ಲಿ ಉನ್ನತ ಶಿಕ್ಷಣ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಸುಸಜ್ಜಿತ ಹಾಸ್ಟೆಲ್, ಉದ್ಯೋಗಸ್ಥರಿಗೆ ಪಿ.ಜಿ ವ್ಯವಸ್ಥೆ**

ರಾಜ್ಯದ ಬಂಧುಗಳ ದಶಕಗಳ ಕನಸು ಹಾಗೂ ಇಚ್ಛೆ. ಸಾಂಸ್ಕೃತಿಕ ನಗರ ಮೈಸೂರು ನಗರಕ್ಕೆ ಉನ್ನತ ಶಿಕ್ಷಣ (ಎಲ್ಲಾ ರೀತಿಯ ಡಿಗ್ರಿ ಕೋರ್ಸುಗಳು)ಕ್ಕಾಗಿ ಆಗಮಿಸುವ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ 2023-2024ರ ಶೈಕ್ಷಣಿಕ ವರ್ಷದಿಂದ ಮೈಸೂರು ನಗರದ ಗೀತಾಮಂದಿರ ರಸ್ತೆಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಹಾಸ್ಟೆಲ್‌ನಲ್ಲಿ ಪ್ರವೇಶಗಳನ್ನು ನೀಡಲಾಗಿದೆ.

1. **ಉನ್ನತ ಗುಣಮಟ್ಟದ ಸುಸಜ್ಜಿತ ಹಾಸ್ಟೆಲ್**
2. **ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಪ್ರವೇಶದ್ವಾರಗಳು.**
3. **ಕ್ರೀಡಾಪಟುಗಳಿಗೆ ಪ್ರೋತ್ಸಾಹ.**
4. **ರೀಡಿಂಗ್ ರೂಂ/ಡಿಜಿಟಲ್ ಲೈಬ್ರರಿ ವ್ಯವಸ್ಥೆ**
5. **ವ್ಯಾಯಮ ಶಾಲೆ.**
6. **ಶುಚಿ-ರುಚಿಯಾದ ಊಟದ ವ್ಯವಸ್ಥೆ**



**ಹಾಸ್ಟೆಲ್ ಹಾಗೂ ಅತಿಥಿ ಗೃಹ ಕಟ್ಟಡದ ವಿಹಂಗಮ ನೋಟ**



## ಅತಿಥಿ ಗೃಹ, ಬೆಂಗಳೂರು

ನಾನಾ ಕಾರ್ಯನಿಮಿತ್ತ ಬೆಂಗಳೂರು ನಗರಕ್ಕೆ ಆಗಮಿಸುವಂತಹ ಪ್ರವಾಸಿಗರಿಗೆ ಉಳಿದುಕೊಳ್ಳಲು ಉತ್ತಮವಾದ ಸುಸಜ್ಜಿತವಾದ, ಸುಂದರವಾದ ಅತಿಥಿಗೃಹಗಳನ್ನು ಮಹಾಸಭೆಯ ಆವರಣದಲ್ಲಿ ನಿರ್ಮಾಣ ಮಾಡಲಾಗಿದೆ.

## ಅತಿಥಿ ಗೃಹ, ಮೈಸೂರು

- **ಮೈಸೂರು ನಗರದ ಹೃದಯ ಭಾಗದಲ್ಲಿ ಬಸ್ ನಿಲ್ದಾಣದಿಂದ ಕೇವಲ ಕಾಲ್ನಡಿಗೆ ದೂರದಲ್ಲಿ.**
- **ರೈಲ್ವೆ ನಿಲ್ದಾಣದಿಂದ ಕೇವಲ 10 ನಿಮಿಷಗಳ ದೂರ**
- **ಹವಾನಿಯಂತ್ರಿತ 18 ಅತಿಥಿ ಕೊಠಡಿಗಳು**
- **ಸಾಮೂಹಿಕ ಸಾಮಾನ್ಯ ವಸತಿ (ಡಾರ್ಮಿಟರಿ)**
- **ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆ**





## ಡಾರ್ಮೆಟರಿ-ಬೆಂಗಳೂರು ಮತ್ತು ಮೈಸೂರು

ಹಲವು ಹಾಸಿಗೆಗಳ ಸಾಮರ್ಥ್ಯವಿರುವ ಮತ್ತು ಖಾಸಗಿತನಕ್ಕೆ ಅಡ್ಡಿಯಾಗದ ಕಡಿಮೆ ಮೊತ್ತದ ಡಾರ್ಮೆಟರಿ ವಸತಿ ಕುಲಬಾಂಧವರಿಗೆ ಸೇವೆ ನೀಡುತ್ತಿದೆ.

## ವಿದ್ಯಾರ್ಥಿಮಿತ್ರ ಬಡ್ಡಿ ರಹಿತ ಸಾಲ ಯೋಜನೆ

ಪ್ರತಿಭೆಯಿಂದಲೇ ಆರ್ಥಿಕ ಒತ್ತಡಗಳಲ್ಲಿರುವ ಉನ್ನತ ವ್ಯಾಸಂಗದ ವಿದ್ಯಾರ್ಥಿಗಳ ಶಿಕ್ಷಣದ ಅಗತ್ಯತೆಗಳಿಗಾಗಿ ಪ್ರತೀ ವರ್ಷ ಗರಿಷ್ಟ ರೂ.1,00,000/–ಗಳ ಬಡ್ಡಿ ರಹಿತ, ಆಧಾರ ರಹಿತ ಸಾಲ ಸೌಲಭ್ಯ ನೀಡುವ ವಿದ್ಯಾರ್ಥಿಮಿತ್ರ ಯೋಜನೆ. (ಈ ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ ಬ್ಯಾಂಕಿಂಗ್ ಸಂಸ್ಥೆಗಳಿಂದ ಸಾಲ ಕೊಡಿಸಿ, ಮಹಾಸಭೆಯೇ ಗ್ಯಾರಂಟಿಯಾಗುವುದಲ್ಲದೆ, ಬಡ್ಡಿ ಪಾವತಿ ಜವಾಬ್ದಾರಿಯನ್ನು ಹೊಂದಿದೆ)



2018ರಿಂದ ಪ್ರಾರಂಭವಾದ ಈ ಯೋಜನೆಯಲ್ಲಿ ಇಲ್ಲಿಯವರೆವಿಗೂ ಒಟ್ಟು **397** ವಿದ್ಯಾರ್ಥಿಗಳು ಇದರ ಸೌಲಭ್ಯವನ್ನು ಪಡೆದುಕೊಂಡಿದ್ದು, **ರೂ. 6,57,59,558/–** ಗಳ ಮೊತ್ತವನ್ನು ಬಿಡುಗಡೆ ಮಾಡಿರುತ್ತೇವೆ. ಈ ಯೋಜನೆಯ ಮೂಲಕ ಸಹಾಯಪಡೆದ ಸುಮಾರು **243** ವಿದ್ಯಾರ್ಥಿಗಳು ಈಗಾಗಲೇ ಮರುಪಾವತಿಯನ್ನು ಪ್ರಾರಂಭಿಸಿರುತ್ತಾರೆ.

## ವಿದ್ಯಾರ್ಥಿಮಿತ್ರ ಬಡ್ಡಿ ರಹಿತ ಸಾಲ ಯೋಜನೆಯ 2024–25ನೇ ಸಾಲಿನ ಫಲಾನುಭವಿಗಳು

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ವೈಷ್ಣವಿ | ಮಂಜುನಾಥ ಜನಾದ್ರಿ | ಕೊಪ್ಪಳ |
| ಸಾತ್ವಿಕ್ ಡಿ | ದೀಪಕ್ ಡಿ | ಸಕಲೇಶ್‌ಪುರ |
| ಕೌಸ್ತುಭ ಡಿ ಜಿ | ಗೋವಿಂದರಾಜು ಡಿ ಎಸ್ | ಪಾವಗಡ |
| ಪವನ್ ಕುಮಾರ ಬಿ | ಬಸವರಾಜ್ ಶೆಟ್ಟಿ | ಮಾಕಳಿ |
| ಪ್ರಿಯಾಂಕ ಇ | ರಾಮಕೃಷ್ಣ | ಕಂಪ್ಲಿ |
| ಸಾಹಿತಿ ಟಿ ಎಸ್ | ಸತೀಶ್ ಬಾಬು ಟಿ ಎಸ್ | ಗೋವಿಂದರಾಜನಗರ |
| ಮೌನೇಶ್ ಡಿ ಎಸ್ | ಶ್ರೀನಾಥ್ | ಸಿಂಗಾಳ್ |
| ವಿನಯ್ ಕೆ | ಮಂಜುನಾಥ ಕೆ | ಚೇಳೂರು |
| ವೈಭವ್ ಯು | ಲೇ॥ ಉಮೇಶ್ ವಿ | ಮೈಸೂರು |
| ಆದಿತ್ಯ ಎಂ ಅನೇಗುಂದಿ | ಮಲ್ಲಿಕಾರ್ಜುನ ಆನೆಗುಂದಿ | ಹುಬ್ಬಳ್ಳಿ |
| ಸಂಜನ ಎಸ್ ಕಂದಕೂರು | ಸತೀಶ್ ಜೆ ಕಂದಕೂರು | ಕೆರೂರು |
| ಸಾನಿಕ ಆರ್ | ಮಂಜುನಾಥ್ | ಮಾನ್ವಿ |
| ವಿಶ್ವಾಸ ಎನ್ | ನಾರಾಯಣಸ್ವಾಮಿ | ಬೇತಮಂಗಲ |
| ಯಶಸ್ವಿನಿ ಡಿ | ದೀಪಕ್ ಕೆ | ಮದ್ದೂರು |
| ಸ್ಫೂರ್ತಿ ಎಂ | ಜಗದೀಶ್ ಶೆಟ್ಟಿ ಎಂ | ಬಳ್ಳಾರಿ |
| ಸಾಗರ್ ಬಿ ಕೆಂಚನಗುಡ್ಡ | ಬಸವರಾಜ್ ಕೆಂಚನಗುಡ್ಡ | ಕೆಂಚನಗುಡ್ಡ |
| ಕಿಶೋರ್ ಜೆ ಮುದೆನೂರು | ಜಗದೀಶ್ ಮುದೆನೂರು | ಮುಂಡರಗಿ |
| ಶ್ರೇಯಾ ಎ ಆರ್ | ರಾಘವೇಂದ್ರ ಶೆಟ್ಟಿ | ಆನೆಗುಂದಿ |
| ಕಮಲ್ ಸಿ | ಚಿನ್ನರೆಡ್ಡಪ್ಪ ವಿ | ಪೂರ್ಣಪಲ್ಲಿ |
| ಸಿರಿ ರಮ್ಯ ಆರ್ | ರಾಘವೇಂದ್ರ ವೈ ಎನ್ | ಬೇಲೂರು |
| ಅಖಿಲೇಶ್ ಆರ್ ಶಹಾಪುರ | ರಾಘವೇಂದ್ರ ಶಹಾಪುರ | ಕೊಪ್ಪಳ |
| ವಿಶ್ವನಾಥ್ ಗುಪ್ತ | ವೆಂಕಯ್ಯ ಶೆಟ್ಟಿ | ಸಿಂಧನೂರು |
| ಚೇತನ ಹೆಚ್ ಆರ್ | ರಾಜೇಂದ್ರ ಶೆಟ್ಟಿ ಆರ್ | ಹಂಗಾಲ |

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ಶ್ರೀನಿವಾಸ ಗುಪ್ತ | ಲೇ॥ ರಾಧಾಕೃಷ್ಣ ಶೆಟ್ಟಿ | ಜೆ ಪಿ ನಗರ |
| ಅನುಷ ಟಿ | ರಮೇಶ್ ಟಿ | ಬಳ್ಳಾರಿ |
| ಮಮತ ಎಂ | ಶ್ರೀನಾಥ್ ಎಂ | ಬಳ್ಳಾರಿ |
| ಆಕಾಶ್ ಟಿ ಆರ್ | ಆಕಾಶ್ ಟಿ ಆರ್ | ಮಾಗಡಿ ರೋಡ್ |
| ಸುಹಾಸ್ ಕೆ ಶೆಟ್ಟಿ | ಕೃಷ್ಣ ಎಂ ಶೆಟ್ಟಿ | ಉಲ್ವರೆ |
| ವೀರಭದ್ರ ಶೆಟ್ಟಿ ಜೆ ಎಸ್ | ಪ್ರಕಾಶ್ ಶೆಟ್ಟಿ ಜೆ ಎಸ್ | ಕರೂರು |
| ವಿಶೃತ್ ಕೆ ಎಸ್ | ಶ್ರೀನಿವಾಸ ಕೆ ವಿ | ಕಿತಗನೂರು |
| ಸಾಯಿ ಪವನ್ ಎಸ್ ವರದ | ಸೀತಾರಾಮ್ ಎಸ್ | ಶ್ರೀವಾಸಪುರ |
| ಶಿವಾನಿ ಕೆ ಎಸ್ | ಸುದರ್ಶನ ಬಾಬು ಕೆ ಎಸ್ | ಚಳ್ಳಕೆರೆ |
| ಪ್ರತೀಕ್ಷ ಎಂ ಪಿ | ಫಣಿ ಕಿರಣ್ ಎಂ ಹೆಚ್ | ನಾಗಮಂಗಲ |
| ಹರ್ಷಿತ ಎಂ ಆರ್ | ರಾಜೇಶ್ ಎಂ ಆರ್ | ಸೊನ್ನಶೆಟ್ಟಿ ಹಳ್ಳಿ |
| ಶರತ್ಎ | ರವೀಂದ್ರ ಎ | ಹೊಸಪೇಟೆ |
| ಸಂಗೀತ | ಪ್ರಭಾಕರ್ ಎಂ | ಹೊಸಪೇಟೆ |
| ಆದಿತ್ಯ ಟಿ ಪಿ | ಮಲ್ಲಿಕಾರ್ಜುನ ಆನೆಗುಂದಿ | ಬಸವನಗರ |
| ರಾಹುಲ್ ಕನ್ನಾರಿ | ಬದ್ರಿ ನಾರಾಯಣ ಕೆ | ಸಿರಗುಪ್ಪ |
| ಸಾಯಿ ಸುಜನ್ ಎಂ ಕೆ | ಕೊಟ್ರ ಶೆಟ್ಟಿ ಎಂ | ಕೊಟ್ಟೂರು |
| ನಿಹಾರಿಕ ಎಮ | ವೆಂಕಟೇಶ್ವರಲು ಎಂ | ಬಳ್ಳಾರಿ |
| ಇಂದುವಾಸಿ ಸಾಯಿ ವಿಷ್ಣು | ಇಂದುವಾಸಿ ನಾಗರಾಜ | ರಾಯಚೂರು |
| ವಿಕಾಸ್ ಎಸ್ | ಲಕ್ಷ್ಮೀನಾರಾಯಣ | ಕಾರಟಗಿ |
| ರಾಮಸ್ಕಂದನ್ ಎಸ್ ಕೆ | ಕಾಶೀನಾಥ್ ಎಸ್ ಆರ್ | ತ್ಯಾಗರಾಜನಗರ |
| ಕಟಕಂ ಶಿವಮಣಿ | ಕಟಕಂ ಭಾಸ್ಕರ | ರಾಯಚೂರು |
| ಸೌಮ್ಯ ಜೆ | ಪ್ರಹ್ಲಾದ ಜೆ | ಬಳ್ಳಾರಿ |
| ದೀಕ್ಷಿತ ಬಿ ಎಸ್ | ಶ್ರೀನಿವಾಸ ಬಿ ಪಿ | ಮಿಟ್ಟೇಮರಿ |
| ನವೀನ್ ಹೆಚ್ ಎಸ್ | ಶಂಕರನಾರಾಯಣ ಶೆಟ್ಟಿ ಹೆಚ್ ಎಸ್ | ಹಿರಿಯೂರು |
| ಕೃಷ್ಣ ಚರಣ್ ಹೆಚ್ ಪಿ | ಪ್ರಕಾಶ್ ಬಾಬು ಎಸ್ | ಹಿರಿಯೂರು |
| ರಿತಿಶ್ ಕೆ ಆರ್ | ಲೇ॥ ರಮೇಶ್ ಕೆ ಆರ್ | ಶಿವಮೊಗ್ಗ |
| ಪಲ್ಲವಿ ಜಿ ಎಸ್ | ಶ್ರೀಧರ್ ಜಿ ಎ | ಹಿರಿಯೂರು |
| ಶ್ರೀಕರ್ ಆರ್ ಆರ್ | ರವೀಂದ್ರ ಆರ್ ಎಲ್ | ಹರಿಹರ |
| ಸುಪ್ರೀತ ಬಿ | ಮೊಂಪಾಪತಿ ಶೆಟ್ಟಿ | ಬಳ್ಳಾರಿ |

## ವಿದ್ಯಾ ಮಾಣಿಕ್ಯಗಳಿಗೆ ಪ್ರೇರಣಾ ಶಕ್ತಿಯಾದ ಮಹಾಸಭೆಯ 14ನೇ ಪ್ರತಿಭೋತ್ಸವ ಕಾರ್ಯಕ್ರಮ



ಕರ್ನಾಟಕ ಆರ್ಯವೈಶ್ಯ ಮಹಾಸಭೆಯ 14ನೇ ಪ್ರತಿಭೋತ್ಸವ ಕಾರ್ಯಕ್ರಮವು 1ನೇ ಡಿಸೆಂಬರ್ 2024 ಭಾನುವಾರದಂದು ಕರ್ನಾಟಕದ ರಾಜಧಾನಿ ಬೆಂಗಳೂರಿನ ಮಲ್ಲೇಶ್ವರಂನ ಸರ್ಕಾರಿ ಪದವಿಪೂರ್ವ ಕಾಲೇಜಿನ ಮೈದಾನದಲ್ಲಿ ಅತ್ಯಂತ ಅರ್ಥಗರ್ಭಿತವಾಗಿ ಹಾಗೂ ಕಣ್ಮನ ಸೆಳೆಯುವಂತಹ ಭವ್ಯವಾದ ವೇದಿಕೆಯಲ್ಲಿ ನಡೆದು, ನಾಡಿನ ಜನಮಾನಸದಲ್ಲಿ ಅಚ್ಚಳಿಯದೆ ನೆನಪಿನಂಗಳದಲ್ಲಿ ಉಳಿಯುವಂತೆ ಮಾಡಿತು. ಈ ಕಾರ್ಯಕ್ರಮವು ಯುವ ಪ್ರತಿಭೆಗಳ ಮನದಲ್ಲಿ ನವಚೈತನ್ಯವನ್ನು ತುಂಬಿತು. 2024ನೇ ಶೈಕ್ಷಣಿಕ ಸಾಲಿನ ಪ್ರತಿಭೋತ್ಸವಕ್ಕೆ 2161 ಅರ್ಜಿಗಳು ಬಂದಿದ್ದು, ಅದರಲ್ಲಿ 1413 ಅರ್ಜಿಗಳನ್ನು ಅಂಗೀಕರಿಸಲಾಗಿದ್ದು, ವರ್ಷದಿಂದ ವರ್ಷಕ್ಕೆ ಆರ್ಯವೈಶ್ಯ ಸಮಾಜದ ಶೈಕ್ಷಣಿಕ ಕ್ಷೇತ್ರದ ಪ್ರತಿಭಾವಂತರ ಸಾಧನೆಯು ಏರುಗತಿಯಲ್ಲಿ ಸಾಗುತ್ತಿರುವುದಕ್ಕೆ ಸಾಕ್ಷಿಯಾಯಿತು.

ಅಂದು ಬೆಳಿಗ್ಗೆ 9 ಗಂಟೆಗೆ ಮಲ್ಲೇಶ್ವರಂನ ಶ್ರೀ ಕನ್ಯಕಾಪರಮೇಶ್ವರಿ ದೇವಾಲಯದಿಂದ ಪ್ರಾರಂಭವಾದ ಶೋಭಾಯಾತ್ರೆಯನ್ನು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶ್ರೀ ಎಸ್ ಈ ಸುಧೀಂದ್ರರವರು ಉದ್ಘಾಟಿಸಿದರು. ಮುಖ್ಯ ಆಹ್ವಾನಿತರಾಗಿ ಮಲ್ಲೇಶ್ವರಂನ ಆರ್ಯವೈಶ್ಯ ಸಂಘದ ಅಧ್ಯಕ್ಷರಾದ ಡಾ ಪಿ ಎನ್ ಗೋವಿಂದರಾಜುಲುರವರು ಆಗಮಿಸಿದ್ದರು. ಶೋಭಾಯಾತ್ರೆಯ ಮೂಲಕ ಆರ್ಯವೈಶ್ಯ ಸಮಾಜಕ್ಕೆ ಕೀರ್ತಿ ತಂದ ಹೆಮ್ಮೆಯ ವಿದ್ಯಾ ಮಾಣಿಕ್ಯಗಳನ್ನು ವರ್ಣರಂಜಿತ ಕುದುರೆ ಸಾರೋಟುಗಳ ಮೂಲಕ ಬಗೆ ಬಗೆಯ ಪುಷ್ಪದ ಸುರಿಮಳೆಯೊಂದಿಗೆ ನಾದಸ್ವರ ಹಾಗೂ ಬಣ್ಣದ ಬಾಣಬಿರುಸುಗಳೊಂದಿಗೆ ಭವ್ಯ ವೇದಿಕೆಗೆ ಕರೆತರಲಾಯಿತು. ರಾಷ್ಟ್ರದ ಧ್ವಜಾರೋಹಣ ಹಾಗೂ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಪ್ರಾರಂಭದಲ್ಲಿ ಶಿಕ್ಷಣ ತಜ್ಞರು ಹಾಗೂ ಅಂಕಣಕಾರರಾದ ಡಾ ಕೆ ಪಿ ಪುತ್ತೂರಾಯರವರು ವಿದ್ಯಾರ್ಥಿಗಳಿಗೆ ಮೌಲ್ಯಯುತ ಶಿಕ್ಷಣದ ಪ್ರಾಮುಖ್ಯತೆಯನ್ನು ತಿಳಿಸುವ ಜೊತೆಗೆ ಅಚಲ ಆತ್ಮವಿಶ್ವಾಸವನ್ನು ತುಂಬಿದರು.

ನಾಡಿನ ಪ್ರತಿಭಾನ್ವಿತ ವಿದ್ಯಾ ಮಾಣಿಕ್ಯಗಳನ್ನು ಸನ್ಮಾನಿಸುವ ಮಹಾಸಭೆಯ 14ನೇ ಪ್ರತಿಭೋತ್ಸವದ ವೇದಿಕೆಯ ಕಾರ್ಯಕ್ರಮದ ನಿರೂಪಣೆಯನ್ನು ಕನ್ನಡ ಸಾಹಿತ್ಯ ಅಕಾಡಮಿಯ ಸದಸ್ಯರಾದ ಶ್ರೀಮತಿ ಸುಮಾ ಸತೀಶ್‌ರವರು ಅತ್ಯಂತ ಪ್ರೇರಣಾತ್ಮಕ ಮಾತುಗಳಿಂದ ಪ್ರಾರಂಭಿಸಿದರು. ಶ್ರೀಮತಿ ಗೌರವ್ ಸುಧಾ ಮುರಳಿ ಹಾಗೂ ಹರ್ಷಿತಾರವರು ಅತ್ಯಂತ ಸುಮಧುರ ಹಾಡಿನ ಮೂಲಕ ಪ್ರಾರ್ಥನೆ ಮಾಡಿದ ನಂತರ ದಾಬಸ್ ಪೇಟೆಯಲ್ಲಿ ಆರ್ಯವೈಶ್ಯ ಮಹಾಸಭೆಯ ನೇತೃತ್ವದಲ್ಲಿ ನಿರ್ಮಾಣವಾಗಲಿರುವ ಅಂತರಾಷ್ಟ್ರೀಯ ಮಟ್ಟದ ಶಾಲೆಯ ವಿನ್ಯಾಸದ ವೀಡಿಯೋ ಪ್ರದರ್ಶನ ಮಾಡಲಾಯಿತು. ಮಹೋನ್ನತ ಗಣ್ಯಾತಿಗಣ್ಯರನ್ನು ಕರತಾಡನದ ಮೂಲಕ ಭವ್ಯ ವೇದಿಕೆಗೆ ಆಹ್ವಾನಿಸಲಾಯಿತು. ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರಾದ ಶ್ರೀ ಆರ್ ಪಿ ರವಿಶಂಕರ್‌ರವರು ಗಣ್ಯರನ್ನು ಸ್ವಾಗತಿಸುವ ಜೊತೆಗೆ ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದರು. ಕಳೆದ 10 ವರ್ಷಗಳಲ್ಲಿ ಆರ್ಯವೈಶ್ಯ ಸಮಾಜದ ಶೈಕ್ಷಣಿಕ ಕ್ಷೇತ್ರದಲ್ಲಾದ ಅಮೂಲಾಗ್ರ ಪ್ರಗತಿಯ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.




ಕೇವಲ ಪ್ರತಿಭಾವಂತರಾಗುವುದಷ್ಟೇ ಅಲ್ಲದೇ, ದೇಶದ ಆಸ್ತಿಯಾಗಬೇಕೆಂದು ಸಲಹೆ ನೀಡಿದರು. ಮಹಾಸಭೆಯ ಸಮಾಜಕ್ಕೆ ನೀಡಿರುವ ಹಲವಾರು ಯೋಜನೆಗಳನ್ನು ತಿಳಿಸುತ್ತಾ, ಮಹಾಸಭೆಯ ಪ್ರತೀ ವರ್ಷ 5 ಕೋಟಿಯವರೆಗೂ ಶಿಕ್ಷಣ ಕ್ಷೇತ್ರಕ್ಕಾಗಿ ನೀಡಲಾಗುತ್ತಿದ್ದು, ಇಲ್ಲಿಯವರಗೆ 987 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಿ ಪ್ರೋತ್ಸಾಹಿಸಲಾಗಿದೆ. ಕಳೆದ 14 ಪ್ರತಿಭೋತ್ಸವಗಳಲ್ಲಿ 12 ಸಾವಿರ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಪ್ರೇರಣೆ ನೀಡಿದ ಸಂಸ್ಥೆ ಮಹಾಸಭೆಯಾಗಿದೆ ಎಂದು ತಿಳಿಸುವ ಮೂಲಕ ಕಾರ್ಯಕ್ರಮದಲ್ಲಿದ್ದ ಸರ್ವ ಗಣ್ಯರನ್ನು ಹಾಗೂ ಇಡೀ ಸಭಿಕರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ವೇದಿಕೆಯಲ್ಲಿದ್ದ ಎಲ್ಲಾ ಗಣ್ಯರಿಂದ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಲಾಯಿತು. ಕರ್ನಾಟಕದ ಹೆಮ್ಮೆಯ ಮೈಸೂರು ಸಂಸ್ಥಾನದ ರಾಜವಂಶಸ್ಥರು ಹಾಗೂ ಮೈಸೂರು–ಕೊಡಗು ಕ್ಷೇತ್ರದ ಲೋಕಸಭಾ ಸದಸ್ಯರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಸಾಮಾಜಿಕ ಜಾಲತಾಣಗಳಲ್ಲಿ 70 ಸಾವಿರ ದಿಂದ 11 ಲಕ್ಷದವರೆಗೆ ಫಾಲೋವರ್ಸ್ ಹೊಂದಿರುವ ಹೊಂದಿರುವ ಆರ್ಯವೈಶ್ಯ ಸಮಾಜದ 19 ಸೋಷಿಯಲ್ ಇನ್‌ಫ್ಲುಯೆನ್ಸರ್ಸನ್ನು ಹಾಗೂ ಪಿ.ಹೆಚ್.ಡಿ ಪದವೀಧರರನ್ನು ಸನ್ಮಾನಿಸಿದ್ದು ವಿಶೇಷವಾಗಿತ್ತು,

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ಮಹಾಸಭೆಯ ಕಾರ್ಯವನ್ನು ಶ್ಲಾಘಿಸಿದರು. ಮೈಸೂರು ಸಂಸ್ಥಾನದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದ ಶ್ರೀ ಹೆಚ್ ವಿ ನಂಜುಂಡಯ್ಯನವರ ಕೊಡುಗೆಯನ್ನು ಸ್ಮರಿಸಿದರು. ಮೈಸೂರು ಒಡೆಯರಲ್ಲಿದ್ದ ದೂರದೃಷ್ಟಿ ಹಾಗೂ ನೂರಾರು ಯೋಜನೆಗಳು ದೇಶದ ಪ್ರಗತಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸಿದೆ. ಅದರಂತೆ ಕಳೆದ 10 ವರ್ಷಗಳಲ್ಲಿ ದೇಶವು ಅಭಿವೃದ್ಧಿಯ ಪಥದಲ್ಲಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರಗತಿಯು ಸಾಧ್ಯವಾಗುತ್ತದೆ ಎಂಬ ಭರವಸೆಯನ್ನು ನೀಡುತ್ತಾ, ಎಲ್ಲಾ ಪ್ರತಿಭೆಗಳಿಗೆ ಶುಭ ಹಾರೈಸಿದರು.



ಮಲ್ಲೇಶ್ವರಂ ವಿಧಾನಸಭೆಯ ಸದಸ್ಯರಾದ ಡಾ॥ ಸಿ ಎನ್ ಅಶ್ವತ್ಥನಾರಾಯಣರವರು ಮಾತನಾಡುತ್ತಾ, ಆರ್ಯವೈಶ್ಯ ಸಮಾಜ ಕೇವಲ ವ್ಯಾಪಾರ ಕ್ಷೇತ್ರದಲ್ಲಷ್ಟೇ ಅಲ್ಲದೇ, ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆಗಾಗಿ ಆರ್ ಪಿ ರವಿಶಂಕರ್‌ರವರ ನೇತೃತ್ವದ ಮಹಾಸಭೆಯು ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಗುಣಮಟ್ಟದ ಶಿಕ್ಷಣಕ್ಕಾಗಿ ಎನ್.ಇ.ಪಿ–2020 ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಗಿದ್ದು, ಅದು ಪರಿಣಾಮಕಾರಿ ಅನುಷ್ಠಾನವು ಅತ್ಯಂತ ಪ್ರಮುಖವಾಗಿದೆ ಎಂದು ತಿಳಿಸುತ್ತಾ, ಎಲ್ಲಾ ಪ್ರತಿಭಾನ್ವಿತರಿಗೆ ಶುಭ ಹಾರೈಸಿದರು.

ಸುಪ್ರಿಂಕೋರ್ಟಿನ ವಕೀಲರಾದ ಶ್ರೀ ಕೆ ಆರ್ ಪ್ರದೀಪ್‌ರವರು ಮಾತನಾಡುತ್ತಾ, ಶಿಕ್ಷಣ ಕ್ಷೇತ್ರದಲ್ಲಿ ಆರ್ಯವೈಶ್ಯ ಸಮಾಜದ ಯುವ ಮಿತ್ರರು ಮಾಡುತ್ತಿರುವ ಅಮೋಘ ಸಾಧನೆಯನ್ನು ಪ್ರಶಂಶಿಸಿದರು. ಸಮಾಜದ ಸರ್ವತೋಮುಖ ಪ್ರಗತಿಗೆ ಆರ್ಯವೈಶ್ಯ ಸಮಾಜದ ಕೊಡುಗೆಯನ್ನು ಶ್ಲಾಘಿಸಿದರು.

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ ಎಸ್ ಅರುಣ್‌ರವರು ಮಾತನಾಡುತ್ತಾ, ಆರ್ಯವೈಶ್ಯರು ಲಕ್ಷ್ಮೀ ಮತ್ತು ಸರಸ್ವತಿ ಪುತ್ರರಾಗಿದ್ದಾರೆ. ನಮ್ಮ ಪ್ರತಿಭೆಗಳು ವರ್ಷ–ವರ್ಷಕ್ಕೂ ಅಮೋಘ ಸಾಧನೆಗಳನ್ನು ಮಾಡುತ್ತಿದ್ದು, ಇದು ಅತ್ಯುತ್ತಮ ಬೆಳವಣಿಗೆಯಾಗಿದೆಯೆಂದು ತಿಳಿಸಿದರು. ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶ್ರೀ ಎಸ್ ಈ ಸುಧೀಂದ್ರರವರು ಮಾತನಾಡುತ್ತಾ, ಮಹಾಸಭೆಯ ಅಧ್ಯಕ್ಷರಾದ ಆರ್ ಪಿ ರವಿಶಂಕರ್‌ರವರ ತಂಡವು ನಿರಂತರವಾಗಿ ಸಮಾಜದ ಪ್ರಗತಿಗಾಗಿ ಶ್ರಮಿಸುತ್ತಿದ್ದಾರೆ. ಆರ್ಯವೈಶ್ಯ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ನಿಮ್ಮೊಂದಿಗೆ ಸದಾ ಇರುತ್ತೇನೆಂದು ತಿಳಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಬಿ ಎಸ್ ರಘುವೀರರವರು, ಶಿಕ್ಷಣದಲ್ಲಿ ಕೇವಲ ಪದವಿಯನ್ನು ಪಡೆಯುವುದಷ್ಟೇ ಅಲ್ಲದೇ, ಪದವಿಯ ಆಧಾರದ ಮೇಲೆ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕೆಂದು ಎಲ್ಲರಿಗೂ ಶುಭ ಹಾರೈಸಿದರು. ಮಲ್ಲೇಶ್ವರಂನ ಆರ್ಯವೈಶ್ಯ ಸಂಘದ ಅಧ್ಯಕ್ಷರಾದ ಡಾ ಪಿ ಎನ್ ಗೋವಿಂದರಾಜುಲುರವರು ವಿದ್ಯಾ ಮಾಣಿಕ್ಯಗಳಿಗೆ ಶುಭ ಹಾರೈಸಿದರು.




ಕರ್ನಾಟಕ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಂದ ಪಿ.ಹೆಚ್.ಡಿ ಪಡೆದ 20 ಡಾಕ್ಟರೇಟ್ ಪದವೀಧರರು, ವಿವಿಧ ವಿಶ್ವವಿದ್ಯಾಲಯಗಳಿಂದ ರ್‍ಯಾಂಕ್‌ಗಳಿಸಿದ 25 ಸ್ನಾತಕ ಮತ್ತು ಸ್ನಾತಕೋತ್ತರ ಪದವೀಧರರು, ಚಿನ್ನದ ಪದಕ ಪಡೆದ 07 ಪ್ರತಿಭಾವಂತರು, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ 6 ವಿಷಯಗಳಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದ 06 ವಿದ್ಯಾರ್ಥಿಗಳು, ವಿವಿಧ ವಿಶ್ವವಿದ್ಯಾಲಯಗಳಿಂದ ಸ್ನಾತಕ(ಪಿಜಿ) ಪದವಿ ಪಡೆದ ಪ್ರತಿಭಾನ್ವಿತ 26 ವಿದ್ಯಾರ್ಥಿಗಳು, ಮೆಡಿಕಲ್ ಪದವಿ ಪಡೆದ 20 ವಿದ್ಯಾರ್ಥಿಗಳು, ಸಿಎ ಪದವಿ ಪಡೆದ 23 ಪ್ರತಿಭಾನ್ವಿತರು, ಸ್ನಾತಕೋತ್ತರ(ಯುಜಿ) ಪದವಿ ಪಡೆದ 400 ವಿದ್ಯಾರ್ಥಿಗಳು, ಡಿಪ್ಲೊಮಾ ಶಿಕ್ಷಣ ಪದವಿ ಪಡೆದ 10 ವಿದ್ಯಾರ್ಥಿಗಳು, ಎಸ್.ಎಸ್.ಎಲ್.ಸಿ ಯಿಂದ 243 ಹಾಗೂ ಪಿಯುಸಿ ಯಿಂದ 531 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಭವ್ಯ ವೇದಿಕೆಯಲ್ಲಿ ಗಣ್ಯರು ಸನ್ಮಾನಿಸಿದರು. ನೆರವೇರಿಸಲಾಯಿತು.

ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಡಳಿತ ಮಂಡಳಿಯ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಜಿಲ್ಲಾ ಸಮಿತಿಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಹಾಗೂ ಉಪಸಮಿತಿಗಳ ಪದಾಧಿಕಾರಿಗಳು, ಬೆಂಗಳೂರಿನ ಆರ್ಯವೈಶ್ಯ ಮಂಡಳಿಗಳು ಹಾಗೂ ಸಹೋದರ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸುವ ಮೂಲಕ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಯಿತು. ನಾಡಿನ ಮೂಲೆ ಮೂಲೆಗಳಿಂದ ಆಗಮಿಸಿದ್ದ ವಿವಿಧ ಗಣ್ಯಮಾನ್ಯರು, ವಿದ್ಯಾಮಾಣಿಕ್ಯಗಳು, ಮಾತೆಯರು, ಮಹನೀಯರು, ಪೋಷಕರು ಭಾಗವಹಿಸುವ ಮೂಲಕ ಸಭಾಂಗಣವು ತುಂಬಿತ್ತು. ಪ್ರತೀ ವರ್ಷದ ಆರ್ಯವೈಶ್ಯ ಸಮಾಜದ

ಶೈಕ್ಷಣಿಕ ಹಬ್ಬ ಪ್ರತಿಭೋತ್ಸವ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆದು ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಸಂಘಟನಾ ಶಕ್ತಿಗೆ ಸಾಕ್ಷಿಯಾಗಿತ್ತು.

**ಪ್ರತಿಭೋತ್ಸವ ಕಾರ್ಯಕ್ರಮದ ವರದಿ:**

**ಡಾ. ಅಜಯ್ ಕುಮಾರ್ ಎಂ.ವಿ**

ಅಧ್ಯಕ್ಷರು, ಯುವ ಸಬಲೀಕರಣ ವಿಭಾಗ ಕರ್ನಾಟಕ ಆರ್ಯವೈಶ್ಯ ಮಹಾಸಭೆ

## ಸಂಧ್ಯಾಶ್ರೀ

65 ವರ್ಷ ಮೇಲ್ಪಟ್ಟ, ಆರ್ಥಿಕ ಸಂಕಷ್ಟದಲ್ಲಿರುವ ವಿಧವಾ ಮಾತೆಯರಿಗೆ ಅಜೀವ ಪರ್ಯಂತ ಮಾಸಿಕ ರೂ.1,500/–ಗಳನ್ನು ನೀಡುತ್ತಿರುವ **ಸಂಧ್ಯಾಶ್ರೀ ಯೋಜನೆ.** 2018ರಲ್ಲಿ ಪ್ರಾರಂಭವಾದ ಈ ಯೋಜನೆಯಲ್ಲಿ ಇಲ್ಲಿಯವರೆಗೂ ಒಟ್ಟು **466** ವಿಧವಾ ಮಾತೆಯರು ಇದರ ಸೌಲಭ್ಯವನ್ನು ಪಡೆದುಕೊಂಡು, ಮಾತೆಯರು ಉತ್ತಮ ಜೀವನವನ್ನು ನಿರ್ಮಾಣ ಮಾಡಿಕೊಳ್ಳಲು ಮಹಾಸಭೆ ಸಹಾಯ ಹಸ್ತ ನೀಡಿದೆ.



**ಸಂಧ್ಯಾಶ್ರೀ ಮಾತೆಯರಿಗೆ ಗೌರವ ಸಮರ್ಪಣೆ ಮಾಡಿ ಸಂಭ್ರಮಿಸಿದ ನಾದಸಿಂಚನ ತಂಡ**

ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಸಂಧ್ಯಾಶ್ರೀ ಯೋಜನೆಯ ಬೆಂಗಳೂರು ನಗರದ ಫಲಾನುಭವಿಗಳಾಗಿರುವ ಹಿರಿಯ ವಿಧವಾ ಮಾತೆಯರನ್ನು ವೇದಿಕೆಯಲ್ಲಿ ವಿರಾಜಮಾನರನ್ನಾಗಿಸಿ ಅವರೆಲ್ಲರನ್ನೂ ಅಭಿನಂದಿಸಿದ ಅಮೃತ ಕ್ಷಣ ಹೃದಯಸ್ಪರ್ಶಿಯಾಗಿತ್ತು.

### 2024–2025 ರ ಸಂಧ್ಯಾಶ್ರೀ ಫಲಾನುಭವಿಗಳ ಪಟ್ಟಿ

| ಫಲಾನುಭವಿಯ ಹೆಸರು | ಊರು | ಜಿಲ್ಲೆ |
|---|---|---|
| ರಾಧಮ್ಮ ಡಿ | ಶ್ರೀನಿವಾಸಪುರ | ಕೋಲಾರ |
| ಶಕುಂತಲಮ್ಮ ಆರ್ ಜಿ | ಮುಳಬಾಗಿಲು | ಕೋಲಾರ |
| ಕೃಷ್ಣವೇಣಿ ಸಿ ಪಿ | ಕೋಲಾರ | ಕೋಲಾರ |
| ಗೀತಮ್ಮ | ಚಿತ್ರದುರ್ಗ | ಚಿತ್ರದುರ್ಗ |
| ಗಾಯತ್ರಿ ಆರ್ | ಚಿತ್ರದುರ್ಗ | ಚಿತ್ರದುರ್ಗ |
| ಸತ್ಯಭಾಮ | ಚಳ್ಳಕರೆ | ಚಿತ್ರದುರ್ಗ |
| ಪದ್ಮಾವತಿ ಎ ಜಿ | ಮೊಳಕಾಲ್ಮುರು | ಚಿತ್ರದುರ್ಗ |
| ರತ್ನಮ್ಮ ಹೆಚ್ | ಬಳ್ಳಾರಿ | ಬಳ್ಳಾರಿ |
| ಶಾರದಮ್ಮ ಪಿ ಆರ್ | ಬಳ್ಳಾರಿ | ಬಳ್ಳಾರಿ |
| ಶಕುಂತಲಮ್ಮ ಎಂ | ಕೊತ್ತಪಲ್ಲಿ | ಬಳ್ಳಾರಿ |
| ಸೀತಮ್ಮ ಇ | ಬಳ್ಳಾರಿ | ಬಳ್ಳಾರಿ |
| ಯೆಂಕಮ್ಮ | ಬೊಮ್ಮಗಟ್ಟ | ಬಳ್ಳಾರಿ |
| ಜಡೆಮ್ಮ | ಎಮ್ಮಿಗನೂರು | ಬಳ್ಳಾರಿ |
| ಶೈಲಜ ಕೆ ಶೆಟ್ಟರ್ | ರಟ್ಟಿಹಳ್ಳಿ | ಹಾವೇರಿ |
| ಪದ್ಮಾವತಿ ಪಿ ಮಿಟಾಯಿಗಾರ್ | ಸೌದತ್ತಿ | ಬೆಳಗಾವಿ |
| ಧನಲಕ್ಷ್ಮಿ ಬಿ | ಗುಡ್ಡುರು | ಬಳ್ಳಾರಿ |
| ವೆಂಕಟಲಕ್ಷ್ಮೀ | ಬಳ್ಳಾರಿ | ಬಳ್ಳಾರಿ |
| ಕಲ್ಪಿ ವಿ | ಶಿವಾಜಿನಗರ | ಬೆಂಗಳೂರು |
| ಲಕ್ಷ್ಮೀದೇವಮ್ಮ | ಯಶವಂತಪುರ | ಬೆಂಗಳೂರು |
| ಲೀಲಾ ಪಿ ಎಲ್ | ಆಂಜನೇಯನಗರ | ಬೆಂಗಳೂರು |
| ಮಂಜುಳ | ಗಂಗಾವತಿ | ಕೊಪ್ಪಳ |
| ಮಹಾಲಕ್ಷ್ಮೀ | ದಾಸನಪುರ | ಬೆಂಗಳೂರು |
| ನಾಗರತ್ನಮ್ಮ | ಪೀಣ್ಯ | ಬೆಂಗಳೂರು |
| ಪ್ರೇಮ ಎ | ಚೋಳರಪಾಳ್ಯ | ಬೆಂಗಳೂರು |
| ರಾಜಮ್ಮ ಆರ್ | ಬಗಲಗುಂಟೆ | ಬೆಂಗಳೂರು |

| ಫಲಾನುಭವಿಯ ಹೆಸರು | ಊರು | ಜಿಲ್ಲೆ |
|---|---|---|
| ರತ್ನಮ್ಮ | ಮಾಗಡಿರೋಡ್ | ಬೆಂಗಳೂರು |
| ಸರಸ್ವತಿ | ಜರಗನಹಳ್ಳಿ | ಬೆಂಗಳೂರು |
| ಶಾರದ ಎಸ್ | ನಾಗರಭಾವಿ | ಬೆಂಗಳೂರು |
| ಸುನಂದ | ಸುಬ್ರಮಣ್ಯ ಪುರ | ಬೆಂಗಳೂರು |
| ಧನಲಕ್ಷ್ಮಮ್ಮ | ತೌಂಡನ ಹಳ್ಳಿ | ಚಿಕ್ಕಬಳ್ಳಾಪುರ |
| ಗೌರಮ್ಮ ಕೆ | ಚಿಂತಾಮಣಿ | ಚಿಕ್ಕಬಳ್ಳಾಪುರ |
| ಹೇಮಾವತಿ ಸಿ ಆರ್ | ಗೌರಿಬಿದನೂರು | ಚಿಕ್ಕಬಳ್ಳಾಪುರ |
| ಶಾಂತ ಕೆ ಎಸ್ | ಕೊಪ್ಪ | ಚಿಕ್ಕಮಗಳೂರು |
| ನಾಗಲಕ್ಷ್ಮೀ | ಬಾಗೇಪಲ್ಲಿ | ಚಿಕ್ಕಬಳ್ಳಾಪುರ |
| ನಾಗಪ್ರಮೀಳ ಪಿ | ಚಿಂತಾಮಣಿ | ಚಿಕ್ಕಬಳ್ಳಾಪುರ |
| ಪದ್ಮಾವತಮ್ಮ ಆರ್ | ಬಾಗೇಪಲ್ಲಿ | ಚಿಕ್ಕಬಳ್ಳಾಪುರ |
| ಸರಸ್ವತಮ್ಮ ಆರ್ | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |
| ಶಕುಂತಲಮ್ಮ | ಬಾಗೇಪಲ್ಲಿ | ಚಿಕ್ಕಬಳ್ಳಾಪುರ |
| ಮಂಗಳಗೌರಿ ಎಸ್ | ಮೈಸೂರು | ಮೈಸೂರು |
| ಸುಬ್ಬರತ್ನಮ್ಮ | ಬಾಗೇಪಲ್ಲಿ | ಚಿಕ್ಕಬಳ್ಳಾಪುರ |
| ಪುಷ್ಪಾವತಿ | ಹಿರಿಯೂರು | ಚಿತ್ರದುರ್ಗ |
| ರೋಜಾವತಿ | ಚಿತ್ರದುರ್ಗ | ಚಿತ್ರದುರ್ಗ |
| ಸೀತಾಲಕ್ಷ್ಮೀ | ಕರುಬರ ಹಟ್ಟಿ | ಚಿತ್ರದುರ್ಗ |
| ಸುಬ್ಬಲಕ್ಷ್ಮೀ ಎನ್ ಕೆ | ನಂಜನಗೂಡು | ಮೈಸೂರು |
| ಶಾಂತಲಕ್ಷ್ಮೀ | ಚಿತ್ರದುರ್ಗ | ಚಿತ್ರದುರ್ಗ |
| ತಾತಿ ಸುಭದ್ರ | ಚಿತ್ರದುರ್ಗ | ಚಿತ್ರದುರ್ಗ |
| ಅನ್ನಪೂರ್ಣ | ದಾವಣಗೆರೆ | ದಾವಣಗೆರೆ |
| ಪಾರ್ವತಿ ಸಿ ಎಸ್ | ದಾವಣಗೆರೆ | ದಾವಣಗೆರೆ |
| ಶಮಂತಮ್ಮ | ದಾವಣಗೆರೆ | ದಾವಣಗೆರೆ |
| ಸುವರ್ಣ ಎಂ | ದಾವಣಗೆರೆ | ದಾವಣಗೆರೆ |
| ಶಕುಂತಲಮ್ಮ ಹೆಚ್ ಎಸ್ | ಹೊಳೆನರಸಿಪುರ | ಹಾಸನ |
| ಗೀತ ಬಿ ಅರ | ಕೊಣನೂರು | ಹಾಸನ |
| ತಿರುಮಲಮ್ಮ ಟಿ | ಕೊಪ್ಪಳ | ಕೊಪ್ಪಳ |
| ಕೋಕಿಲಮ್ಮ | ಹಿಟ್ನಾಳ್ | ಕೊಪ್ಪಳ |
| ಕಮಲ ಬಾಯಿ | ಕಲ್ಬುರ್ಗಿ | ಕಲ್ಬುರ್ಗಿ |
| ಪಾರ್ವತಿ | ಕಲ್ಬುರ್ಗಿ | ಕಲ್ಬುರ್ಗಿ |
| ಶಕುಂತಲ ಎಸ್ | ಕಲ್ಬುರ್ಗಿ | ಕಲ್ಬುರ್ಗಿ |
| ಕಸ್ತೂರಿಬಾಯಿ | ಕಲ್ಬುರ್ಗಿ | ಕಲ್ಬುರ್ಗಿ |
| ಕೃಷ್ಣವೇಣಮ್ಮ | ಶ್ರೀನಿವಾಸಪುರ | ಕೋಲಾರ |
| ನಾಗಲಕ್ಷ್ಮಮ್ಮ ಬಿ | ಶ್ರೀನಿವಾಸಪುರ | ಕೋಲಾರ |
| ಸುಮ ಎಸ್ ವಿ | ಶ್ರೀನಿವಾಸಪುರ | ಕೋಲಾರ |
| ಯಶೋಧಮ್ಮ | ಶ್ರೀನಿವಾಸಪುರ | ಕೋಲಾರ |
| ಸುಲೋಚನ | ನಾಗಮಂಗಲ | ಮಂಡ್ಯ |
| ಅಶ್ವಥಲಕ್ಷ್ಮಿ | ತಮಕೂರು | ತುಮಕೂರು |
| ಗಾಯತಮ್ಮ | ಐಡಿ ಹಳ್ಳಿ | ತುಮಕೂರು |
| ಸರಸ್ವತಿ ವಿ ಎಲ್ | ಮೈಸೂರು | ಮೈಸೂರು |
| ಶ್ರೀ ಲಕ್ಷ್ಮಮ್ಮ | ಮಧುಗಿರಿ | ತುಮಕೂರು |
| ಪುಷ್ಪಾವತಮ್ಮ ಎನ್ | ಪಾವಗಡ | ತುಮಕೂರು |
| ಸರಸ್ವತಿ ಡಿ ಆರ್ | ಮಧುಗಿರಿ | ತುಮಕೂರು |
| ಯಶೋಧಮ್ಮ | ಮಧುಗಿರಿ | ತುಮಕೂರು |

# 2024-25 ಸಾಲಿನ ಲ್ಯಾಪ್‌ಟಾಪ್ ಯೋಜನೆಯ ಫಲಾನುಭವಿಗಳು

## ವಿದ್ಯಾರ್ಥಿಮಿತ್ರ – ಲ್ಯಾಪ್‌ಟಾಪ್ ಯೋಜನೆ

ಆರ್ಥಿಕವಾಗಿ ಹಿಂದುಳಿದಿರುವ ಉನ್ನತ ಶಿಕ್ಷಣದ ಪತ್ರಿಭಾವಂತ ವಿದ್ಯಾರ್ಥಿಗಳ ನಿತ್ಯ ವ್ಯಾಸಂಗದ ಅನುಕೂಲಕ್ಕಾಗಿ ಪ್ರತೀ ವರ್ಷ ಗರಿಷ್ಟ 200 ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್ ನೀಡುವ ವಿಶೇಷ ಯೋಜನೆ



2016ರಿಂದ ಪ್ರಾರಂಭವಾದ ಈ ಯೋಜನೆಯಲ್ಲಿ ಇದುವರೆವಿಗೂ 935 ವಿದ್ಯಾರ್ಥಿಗಳು ಈ ಯೋಜನೆಯ ಮೂಲಕ ಉತ್ತಮ ಭವಿಷ್ಯವನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ.

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ರಂಜಿತ್ ಕುಮಾರ್ ಕೆ ಎ | ಅಶೋಕ್ ಕುಮಾರ್ ಕೆ ಆರ್ | ಗೌನಪಲ್ಲಿ |
| ಭಾರ್ಗವಿ ಸಾಯಿ | ಕೃಷ್ಣ ಪ್ರಸಾದ್ ಪಿ ಎನ್ | ಚಿಕ್ಕಬಾಣಾವರ |
| ಸರ್ವಮಂಗಳ ಮಾರುತಿ ಚಿಂತಾಲ್ | ಲೇ॥ ಮಾರುತಿ ಜಿ ಚಿಂತಾಲ್ | ನವಲಗುಂದ |
| ಅಂಕಿತ ಎಂ ಆರ್ | ರಘುನಾಥ್ ಎಂ ಎಸ್ | ಮಧುಗಿರಿ |
| ಸಾಯಿ ರಮ್ಯಶ್ರೀ | ಅಶ್ವಥ್‌ನಾರಾಯಣ ಶೆಟ್ಟಿ | ಹೊಸಳ್ಳಿ |
| ಅಕ್ಷಿತ್ ಕೆ | ಕಿಶೋರ್ ಕುಮಾರ್ ಎ | ಮಧುಗಿರಿ |
| ವೆಂಕಟೇಶ್ ಈ ಜಿ | ಗೋವಿಂದರಾಜು ಎಂ ವಿ | ಮಧುಗಿರಿ |
| ಋತ್ವಿಕ್ ಹೆಚ್ ಕೆ | ಕಾಶಿನಾಥ್ ಹೆಚ್ ಆರ್ | ವಿವಿ ಪುರಂ |
| ಪವನ್ ಎಸ್ ಎಸ್ | ಶ್ರೀನಿವಾಸುಲು ಎಸ್ ಕೆ | ಚಿಂತಾಮಣಿ |
| ಮೇಘನ ಪಿ ಜಿ | ಗೋವಿಂದರಾಜು ಪಿ ಎಸ್ | ಚಳ್ಳಕೆರೆ |
| ಶರ್ವಾಣಿ ಕೊಂಪಲ್ | ಮಧುಸೂಧನ್ ಕೊಂಪಲ್ | ಲಿಂಗಸೂಗೂರು |
| ವೇಣುವರ್ಧನ ಶೆಟ್ಟಿ ಪಿ | ಸುಬ್ರಮಣ್ಯಮಂ ಪಿ | ಬಳ್ಳಾರಿ |
| ಮೋಹಿತ್ ಎಸ್ ಎಲ್ | ಲಕ್ಷ್ಮೀನಾರಾಯಣ ಎಸ್ ಕೆ | ಬಾಗೇಪಲ್ಲಿ |
| ಅರ್ಪಿತ ಕೆ ಆರ್ | ರಮೇಶ್ ಬಾಬು ಕೆ ಆರ್ | ಬಾಗೇಪಲ್ಲಿ |
| ಶ್ರೀಲಕ್ಷ್ಮಿ ಎಸ್ ಬೊನಗೇರಿ | ಸಂತೋಷ್ ಕುಮಾರ್ | ಬಾದಮಿ |
| ಲಕ್ಷ್ಮೀಪ್ರಿಯಾ ಎ ಎಸ್ | ಸುರೇಶ್ ಬಾಬು ಎ ಎನ್ | ವೈ ಎನ್ ಹೊಸಕೋಟೆ |
| ಭವ್ಯ ರಾಜರಾಜೇಶ್ವರಿ ವಿ | ವೆಂಕಟ ಓಂಕಾರಾಂಜನೇಯಲು ವಿ | ಎ ದಾಸರಹಳ್ಳಿ |
| ಸಾಯಿ ನಿತ್ಯ ಎಂ | ನಾಗೇಂದ್ರ ಗುಪ್ತ ಎಂ | ಚಿಕ್ಕಬಳ್ಳಾಪುರ |
| ಭವೇಶ್ ರಾಮ ಆರ್ ವಿ | ವೇಣುಗೋಪಾಲ ಗುಪ್ತ ಆರ್ | ಕೋಲಾರ |
| ವಿಜಿತ ಜಿ | ಗೋಪಾಲಕೃಷ್ಣ ಪಿ ಎನ್ | ಯಲ್ಲಂಪಲ್ಲಿ |
| ಧೃತಿ ಪಿ ಎ | ಅರವಿಂದ ಬಾಬು ಪಿ ಎಸ್ | ಮಂಡಿಕಲ್ |
| ಸಿಂಚನ ಎಂ ಕೆಂಚನಗುಡ್ಡ | ಮಂಜುನಾಥ್ | ತುಮಕೂರು |
| ಪ್ರಿಯಾ ಗಂಟೆನ್ನವರ್ | ವಿಶ್ವನಾಥ್ ಗಂಟೆನ್ನವರ್ | ಹುಬ್ಬಳ್ಳಿ |
| ಅಕ್ಷಯ್ ಕುಮಾರ್ ಎಸ್ | ಸತ್ಯನಾರಯಣ ಗುಪ್ತ | ಯಲಹಂಕ |
| ಸುಷ್ಮಾ ಮಾನಪ್ಪನವರ್ | ಉಮೇಶ್ ಎಸ್ | ರಟ್ಟಿಹಳ್ಳಿ |
| ಕಿಶನ್ ಟಿ ವಿ | ವೆಂಕಟೇಶ್ ಟಿ ಕೆ | ದಾವಣಗೆರೆ |
| ರಾಘವೇಂದ್ರ ಬಿ | ಪ್ರದೀಪ್ ಜಿ ಭೀಮಪ್ಪನವರ್ | ರಟ್ಟಿಹಳ್ಳಿ |
| ಅದಿತಿ ಎಂ ಬಿಜಾಪುರ | ಮಂಜುನಾಥ್ ಕೆ ಬಿಜಾಪುರ | ಗುಳೇದಗುಡ್ಡ |

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ಲಾಸ್ಯ ಲಹರಿ ಎ | ಅಶೋಕ್ ಕುಮಾರ್ ಎಂ | ಕೊಳ್ಳೇಗಾಲ |
| ಪೃಥ್ವಿ ರಾಜ್ ಆರ್ | ರಮೇಶ್ ಎಸ್ ಆರ್ | ಎಸ್ ಆರ್ ಪಾಳ್ಯ |
| ಅರವಿಂದ್ ಬಿ | ಸುಬ್ಬರಾಜು ಡಿ | ಕುರುಗೋಡು |
| ಅನುಶ್ರೀ ಆರ್ ಟಿ | ತಿಪ್ಪೇಸ್ವಾಮಿ ಶ್ರೇಷ್ಠಿ ಆರ್ | ಬೋಮ್ಮಘಟ್ಟ |
| ಅನನ್ಯ ಕೆ ಎಂ | ಮುರಳಿ ಕೆ ಎಂ | ಭದ್ರಾವತಿ |
| ನಂದಿನಿ | ಸಂಜೀವ ಕುಮಾರ್ | ಚಿಕ್ಕಮಾಲೂರು |
| ಶ್ರೇಯಾ ಪೂಜಿತ ಸಿ ಆರ್ | ರಾಘವೇಂದ್ರ ಸಿ | ಚಳ್ಳಕೆರೆ |
| ಅಂಜು ಎಂ | ಬಸವಣ್ಣ ಶೆಟ್ಟಿ ಎಂ | ತಿಮ್ಮಲಾಪುರ |
| ನಮ್ರತ ಡಿ ಒ | ಓಂಕಾರ ಮೂರ್ತಿ ಎಲ್ ಕೆ | ದಾಸೂಡಿ |
| ಮಹಂತೇಶ್ ವೈ | ವೆಂಕಟೇಶ್ ವೈ | ಮುರಬ್ಬಿಹಾಳ್ |
| ಸುಪ್ರೀತ ಕೆ ಆರ್ | ರಾಂಪ್ರಸಾದ್ ಕೆ ಎಸ್ | ಚಿಕ್ಕಬಳ್ಳಾಪುರ |
| ಕುಸುಮ ಸಿ ಎನ್ | ನವೀನ್ ಕುಮಾರ್ ಸಿ ಎನ್ | ಯೆಲ್ದೂರು |
| ಸಂಜನ ಎಸ್ ರಾಜನಹಳ್ಳಿ | ಶ್ರೀಕಾಂತ ವಿ ರಾಜನಹಳ್ಳಿ | ಹಿಡ್ಕಲ್ ಡ್ಯಾಂ |
| ಲಾವಣ್ಯ ಎಂ ಸಿ | ಚಂದ್ರಶೇಖರ್ ಎಂ ಎಸ್ | ಉಲ್ಲಳ್ ಉಪನಗರ |
| ಅಪೂರ್ವ ಜಿ | ಗೋವಿಂದರಾಜು | ಗುಡಿಬಂಡೆ |
| ಗಾಯತ್ರಿ ಗೋವಿಂದ ಶೆಟ್ಟಿ | ಗೊವಿಂದಶೆಟ್ಟಿ | ಒಡ್ಡರಹಟ್ಟಿ |
| ಮನೋಜ್ ಕುಮಾರ್ ಪಿ ಎನ್ | ನಾಗರಾಜಯ್ಯ ಪಿ ಆರ್ | ಯೆಲ್ಲಂಪಲ್ಲಿ |
| ಕೀರ್ತಿ ಬಿ | ಶ್ರೀನಿವಾಸುಲು ಶೆಟ್ಟಿ ಬಿ | ಬಳ್ಳಾರಿ |
| ಅಕ್ಷ ಕೆ ಎಸ್ | ಸುರೇಶ್ ಎನ್ | ಕೆ ಆರ್ ನಗರ |
| ನೇಹ | ಗುರುರಾಜ್ ಭೂಪಾಲ್ | ಯರ್ರಮಾರಿ |
| ಸಮೀಕ್ಷ ಸಿ ಆರ್ | ರಮೇಶ್ ಸಿ ಆರ್ | ಶಾಸ್ತ್ರಿನಗರ |
| ಶ್ರೀಗೌರಿ ಬಿ ಹೆಚ್ | ಹನುಮಂತ ಶೆಟ್ಟಿ ಬಿ ಎಲ್ | ದಾವಣಗೆರೆ |
| ಹರ್ಷಿತ ಜಿ ಎಸ್ | ಶ್ರೀನಿವಾಸ ಜಿ ಅರ್ | ಪಾವಗಡ |
| ವೈಷ್ಣವಿ ಕೆ ಎ | ಅನಿಲ್ ಕುಮಾರ್ ಕೆ ಆರ್ | ಪಾವಗಡ |
| ವೈಷ್ಣವಿ ಹೆಚ್ ಎಂ | ಮಂಜುನಾಥ್ ಹೆಚ್ ಆರ್ | ಸಾಗರ |
| ಪ್ರಣೀತ ಕೆ ವಿ | ವೆಂಕಟೇಶ್ ಕೆ ವಿ | ಕೊಳ್ಳೇಗಾಲ |
| ನೀಲೋತ್ಪಲ | ಗೋಪಾಲಕೃಷ್ಣ ಕೆ ಎಸ್ | ಕೋಲಾರ |
| ನಾಗಸುಮುಖ್ ಡಿ | ಧನಂಜಯ ಶೆಟ್ಟಿ ಕೆ ಎಸ್ | ಚಿಕ್ಕಮಗಳೂರು |
| ಸಮರ್ಥ್ ಜಿ ವಿ | ವೆಂಕಟೇಶ್ ಶೆಟ್ಟಿ ಜಿ ಎ | ಅರಸಿಕರೆ |
| ದರ್ಶನ್ ಎಂ | ಮೋಹನ್ ರಾಜು ಎ | ಚಿತ್ರದುರ್ಗ |
| ಸಿಂಚನ ಎಂ ಎಸ್ | ಸತೀಶ್ ಕೆ ಆರ್ | ಮಸ್ಕಲ್ |
| ಶಿವ ಗಣೇಶ್ ಸಿ ಎಸ್ | ಶ್ರೀಧರ್ ಶೆಟ್ಟಿ ಸಿ | ನಲ್ಲೂರು |
| ಚಾರ್ವಿ ಎನ್ | ನರಸಿಂಹಲು ಎನ್ | ದ್ವಾರಕಾನಗರ |
| ಮನೋಜ್ಞಶ್ರೀ ಕೆ ಜೆ | ಜಯರಾಂ ಕೆ ಪಿ | ಚಿಂತಾಮಣಿ |
| ಅಕ್ಷತಾ ಹೆಚ್ ಅರ್ | ರಮೇಶ್ ಬಾಬು ಹೆಚ್ ಎ | ಬ್ಯಾಲ |
| ವಾಸವಿ ವಿ ಕಂದಕೂರು | ವಿಜಯಕುಮಾರ್ ಆರ್ ಕಂದಕೂರು | ಧಾರವಾಡ |
| ಅಭಿಷೇಕ್‌ಕುಮಾರ್ ದ ವಿಜಾಪುರ | ದತ್ತಾತ್ರೇಯ ಬಿ ಬಿಜಾಪುರ | ಅಥಣಿ |
| ಶ್ರೀಗೌರಿ ಆರ್ | ರಮೇಶ್ ವೈ | ಕುಂದುರು |
| ಚೇತನ ಕೆ ಎಸ್ | ಶ್ರೀನಿವಾಸ ಶೆಟ್ಟಿ ಎಸ್ ವಿ | ಸಿದ್ದೇಶ್ವರನದುರ್ಗ |
| ವೈಷ್ಣವಿ ಎಸ್ ಎ | ಶಿವಕುಮಾರ್ ಐ ಎ | ದಾವಣಗೆರೆ |
| ಲಕ್ಷ್ಮೀನಾರಾಯಣ ಮೋಲಂಪಲ್ಲಿ | ಪ್ರಾಣೇಶ್ | ರಂಗಂಪೇಟೆ |
| ವರ್ಷ | ವಿನಯ್ ಕುಮಾರ್ ವಿ | ಕಾರಟಗಿ |
| ಸಾಯಿ ಸಚಿಜನಾ ಎನ್ ಎಸ್ | ಸತೀಶ್ ಕುಮಾರ್ ಗುಪ್ತ ಎನ್ | ಹೊಸಪೇಟೆ |
| ವೈಷ್ಣವಿ ಹೆಚ್ | ಹನುಮಂತರಾಜ್ ಹೆಚ್ ಎನ್ | ದಾವಣಗೆರೆ |
| ಹರ್ಷಿತ ಪಿ ಆರ್ | ರವೀಂದ್ರನಾಥ ಪಿ ಎಸ್ | ತಿಮ್ಮನಾಯಕನ ಬೆಟ್ಟ |
| ಸಾಧನ ಶೆಟ್ಟಿ ಎಸ್ | ಬಾಲರಾಜ್ ಎಸ್ | ಹೊಸಪೇಟೆ |
| ಧನುಷ್ ಎಂ ಹೊಸೂರು | ಮಹೇಶ್ ಹೆಚ್ ಆರ್ | ಸರಸ್ವತಿಪುರಂ |

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ದರ್ಶನ್ ಪಿ ಆರ್ | ರಮೇಶ್ ಪಿ ವಿ | ಪಲಿಚೆರ್ಲು |
| ಹಂಸಪ್ರಿಯಾ ಎಂ | ಲಕ್ಷ್ಮಿಕಾಂತ ಶೆಟ್ಟಿ | ನಾಗೇನಹಳ್ಳಿ |
| ವೈಷ್ಣವಿ ಇಲ್ಲೂರು | ಗೋವಿಂದರಾಜ್ ಎನ್ ಇಲ್ಲೂರು | ಅಡವಿ ಸೋಮನಾಳ್ |
| ವೆಂಕಟೇಶ್ ಪಿ ಸಿ | ಚಂದ್ರಯ್ಯ ಶೆಟ್ಟಿ | ಪಲಿಚೆರ್ಲು |
| ಶ್ರೀಜ ಸಿ ಎಂ | ಮುರಳಿಧರ ಸಿ ವಿ | ಬೇತಮಂಗಲ |
| ಮಾನಸ್ವಿ ಎ ಗುಂಡ | ಆನಂದ ಎಸ್ ಗುಂಡ | ಅಥಣಿ |
| ವಿಷ್ಣು ಕೆ | ನಾಗರಾಜ ಕೆ | ಬಳ್ಳಾರಿ |
| ನಿಖಿಲ್ ಇ | ದೇವರಾಜ್ ಈ | ಮಾನ್ವಿ |
| ದೀಕ್ಷಿತ್ ಎ | ಅನಂತರಾಜು ಎನ್ | ಶಿವಮೊಗ್ಗ |
| ರಾಹುಲ್ ಎಂ | ವೆಂಕಟೇಶ್ ಎಂ | ಚಿಲವಾಡಗಿ |
| ಸಂಕೀರ್ತ್ ಅರ್ | ಮಹೇಶ್ ಆರ್ | ರಾಯಚೂರು |
| ಅಮೃತ ಎಂ ಗುಪ್ತ | ಮಂಜುನಾಥ್ ಟಿ ಎಸ್ | ಪಟ್ಟನಾಯಕನ ಹಳ್ಳಿ |
| ಧನ್ವಿತ್ ಹೆಚ್ | ಹರೀಶ್ ಹೆಚ್ ಕೆ | ಹಾಸನ |
| ವೈಷ್ಣವಿ ಕಲ್ಕೊಂಡ | ವಿನೋದ್ ಕುಮಾರ್ ಕೆ | ಯಾದಗಿರಿ |
| ರಾಜಾ ಸಾತ್ವಿಕ | ರಾಜ ಕಾಮೇಶ್ | ರಾಯಚೂರು |
| ವಾಸುದೇವ ಭಂಡಾರಿ | ಪುಟ್ಟಪ್ಪ | ಕೊಪ್ಪಳ |
| ಪವನ್ ಕಲ್ಯಾಣ್ ಹೆಚ್ | ಲಕ್ಷ್ಮೀನಾರಾಯಣ ಹೆಚ್ | ಹಿಟ್ನಾಳ್ |
| ಮುಕುಂದ ವಿ | ವೆಂಕಟನಾರಾಯಣ ಮೂರ್ತಿ ಕೆ ಆರ್ | ಮುರಗಮಲ್ಲ |
| ಅರ್ಜುನ್ ಡಿ | ದಯಾನಂದ ಎಲ್ | ಹೂವಿನಹೊಳೆ |
| ಅನೂಪ್ ಎ | ಅಣ್ಣಪ್ಪ ಪಿ | ಕೆ ಜಿ ನಗರ |
| ಶ್ರೀಗೌರಿ ಎಂ | ಶ್ರೀಹರಿ ಎಂ | ಕಂಪ್ಲಿ |
| ರಾಜೀವ್ ಎಸ್ ವಿ | ವ್ಯಾಸರಾಜ ಎಸ್ | ಕೂಡ್ಲಗಿ |
| ದೀಪಕ್ ಎಲ್ ಎಂ | ಮಂಜುನಾಥ್ ಎಲ್ ಎನ್ | ಹೆಗ್ಗರೆ |
| ಧನುಷ್ ಡಿ | ಧನಂಜಯ ಒ ಎಲ್ | ಚಾಮರಾಜನಗರ |
| ಶ್ರೀಧರ್ ಎನ್ | ಚಂದ್ರಮೋಹನ್ ಎನ್ | ಬಳ್ಳಾರಿ |
| ಶ್ರೀಹರಿ ಆರ್ | ಲೇ॥ ರವಿಕುಮಾರ್ ಎಸ್ | ಚಿತ್ರದುರ್ಗ |
| ಶ್ರೀಹರಿ ಎಸ್ ಆರ್ | ರಂಗನಾಥ್ ಎಸ್ ಜಿ | ಶಿವಮೊಗ್ಗ |
| ಗೋಪಿನಾಥ್ ಎಸ್ | ಲೇ॥ ಶರವಣನ್ ಎಸ್ | ಕೊಳ್ಳೆಗಾಲ |
| ಸಾಕ್ಷಿ ಎಂ | ಮಧುಸೂಧನ್ ಶೆಟ್ಟಿ ಎಸ್ ಜೆ | ಚಿಕ್ಕೆರ ಹಳ್ಳಿ |
| ಮನೋಜ್ ಕುಮಾರ್ | ಗೋಪಾಲ ಶೆಟ್ಟಿ | ರಾಯಚೂರು |
| ಮಾನ್ಯ ಬಿ ಎಂ | ಮಂಜುನಾಥ್ ಬಿ | ದಾವಣಗೆರೆ |
| ಸಾಯಿಚರಣ್ ಸಿ | ರಾಘವೇಂದ್ರ ಸಿ | ಕಂಪ್ಲಿ |
| ರಂಜಿತ ಬಿ ಕೆ | ಬಸವರಾಜ ಬಿ ಕೆ | ಕಾರಟಗಿ |
| ಶಿವಾನಿ ಡಿ ಭೂಪಾಲಂ | ದಿನೇಶ್ ಹೆಚ್ ಬಿ | ಚಿಕ್ಕಮಗಳೂರು |
| ಅನಿರುದ್ಧ್ ಪಿ ಸಿ | ಚಂದ್ರಕುಮಾರ್ ಪಿ ಎನ್ | ತುಮಕೂರು |
| ಪೂಜಿತ ಜಿ ವಿ | ಪ್ರಕಾಶ್ ರಾವ್ ಜಿ ವಿ | ಮೊಳಕಾಲ್ಮೂರು |
| ವಿಷ್ಣುಪ್ರಿಯಾ ಬಿ | ಫಣಿರಾಜ ಬಿ | ಸಿದ್ಧರಾಮನಹಳ್ಳಿ |
| ವೈಷ್ಣವಿ ಟಿ | ಅರುಣ್ ಕುಮಾರ ಟಿ ಎ | ರಾಯಚೂರು |
| ಪವನ್ ಕುಮಾರ್ ಎ | ರವಿಕುಮಾರ್ ಎ | ಕೋಟಾ |
| ದರ್ಶನ್ ಬಿ ಆರ್ | ರವಿಬಾಬು ಬಿ ಎನ್ | ಶ್ರೀನಿವಾಸಪುರ |

| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ಶಶಾಂಕ್ ಜಿ ಎನ್ | ನಾಗರಾಜ ಜಿ ಎಂ | ಗುಮ್ಮನಕೊಳ್ಳಿ |
| ಪ್ರೇರಣ ಇ ಸಿ | ಚಂದ್ರಶೇಖರ್ ಇ ವಿ | ತ್ಯಾಗರಾಜನಗರ |
| ಶ್ರೇಯಾ ಬಿ | ಬಾಲಾಜಿ ಜಿ | ದೇವಸಂದ್ರ |
| ದೀಪ್ತಿ ಆರ್ ಎಸ್ | ಸುಬ್ರಮಣ್ಯಮಂ ಆರ್ ಸಿ | ಆಶೀರ್ವಾದ್ ಲೇಔಟ್ |
| ಸೃಷ್ಟಿ | ವೆಂಕಟಟೇಶ್ | ಕೊಪ್ಪಳ |
| ವರುಣ್ ಕುಮಾರ್ ಟಿ ಜಿ | ಅನಂತಸೇನ ಶೆಟ್ಟಿ ಟಿ ಜಿ | ಬಳ್ಳಾರ |
| ರೋಹನ್ ಜಿ | ನಾಗರಾಜ್ ಜಿ | ರಾಯಚೂರು |
| ನಿಶಾನ್ ಸಿ | ಚಿತ್ರಾಲ್ ಜೆ ಜೆ | ಹರಪನಳ್ಳಿ |
| ಶಿವತೇಜ ಮೈಲಾಪುರ | ಚಂದ್ರಶೇಖರ್ ಮೈಲಾಪುರ | ಸೇಡಂ |
| ಶ್ರೀಧರ್ ಟಿ ಆರ್ | ರಾಜೇಶ್ ಟಿ ಎಸ್ | ಕುಮಾರಸ್ವಾಮಿ ಲೇಔಟ್ |
| ಶ್ರಾವಣಿ | ಕಂದೂರು ಮಂಜುನಾಥ್ | ವಿಠಲಪುರ |
| ಭೂಮಿಕ | ಹನುಮೇಶ್ ಕೆ | ವಡ್ಡರಹಟ್ಟಿ |
| ಶ್ರೇಯಾ | ವೆಂಕಟೇಶ್ ವಿ | ಸೇಡಂ |
| ಭವ್ಯ ಕೆ ವಿ | ವೇಣುಗೋಪಾಲ ಶೆಟ್ಟಿ ಕೆ | ಗೌರಿಬಿದನೂರ |
| ಸಾಯಿ ಶ್ರೇಯಸ್ ಕೆ | ದಿನೇಶ್ ಕೆ ಎಸ್ | ಶ್ರಿನಗರ |
| ರಾಹುಲ್ ಗುಪ್ತ ಜೆ ಹೆಚ್ | ಹುಲಿಕುಂಟರಾಜ ಶ್ರೇಷ್ಠಿ ಜೆ ಎಸ್ | ಸೊವೇನಹಳ್ಳಿ |
| ಸುಹಾಸ್ ಬಿ ಕೆ | ಕೃಷ್ಣ ಶೆಟ್ಟಿ ಬಿ ಎಸ್ | ಬುಕ್ಕಾಪಟ್ಟಣ |
| ಅನನ್ಯ ಎ | ಬಾಲಜಿ ಎ | ಹೊಸದರೋಜಿ |
| ನಂದ ಕುಮಾರ್ | ಶ್ರೀನಿವಾಸ ವನಮಾಲಿ | ಮಕ್ತಾಪುರ |
| ಧನುಷ್ ಕುಮಾರ್ ಡಿ ವಿ | ವೆಂಕಟೇಶ್ ಪಿ ಎಸ್ | ಮುನೇಶ್ವರ ಬ್ಲಾಕ್ |
| ಸಾಯಿ ಪೃಧ್ವಿ ಎನ್ | ರಾಘವೇಂದ್ರ ಎನ್ | ಬಳ್ಳಾರಿ |
| ಶಶಾಂಕ್ ಆರ್ ಎಸ್ | ಸುದರ್ಶನ್ ಆರ್ | ದಾವಣಗೆರೆ |
| ಲಕ್ಷ್ಮೀ ಎಂ ಎಸ್ | ಲೇ|| ಸತ್ಯನಾರಾಯಣ ಶೆಟ್ಟಿ ಕೆ ಎಸ್ | ಚಿಂತಾಮಣಿ |
| ವಿಭಾ ಕೆ | ವಿಜಯಕುಮಾರ್ ಕೆ | ರಾಯಚೂರು |
| ಯಶಸ್ವಿನಿ ಪಿ ವಿ | ವೆಂಕಟೇಶ್ ಪಿ ಎಸ್ | ಮುನೇಶ್ವರ ಬ್ಲಾಕ್ |
| ಶ್ರೀವತ್ಸ | ರಾಜಣ್ಣ ವಿ | ತುಮಕೂರು |
| ಆದಿತ್ಯ ಗಂಧಿ | ಮಹೇಶ್ ಗಂಧಿ | ಬೀದರ್ |
| ವಿನಾಯಕ ಹೆಚ್ | ಹನುಮಂತರಾಜ್ ಜಿ | ಯರ್ರಂಹಳ್ಳಿ |
| ವಿಷ್ಣು ಇ | ನಾರಾಯಣ ಆರ್ ಇ | ಬಳ್ಳಾರಿ |
| ನಿಶಾನ್ ಜೆ ಎನ್ | ನಿತ್ಯಾನಂದ ಜೆ ಜಿ | ಸೋವೇನಹಳ್ಳಿ |
| ಹಿತೈಷಿ ಕೆ ಎ | ಅನಂದ್ ಬಾಬು ಕೆ ಎಸ್ | ಗುಡಿಪಲ್ಲಿ |
| ಸಾಯಿ ಈಶ್ವರ್ ಕೆ ಎಸ್ | ಶಿವ ಪ್ರಕಾಶ್ ಕೆ ವಿ | ಕೊಡಿಗೇನ ಹಳ್ಳಿ |
| ನಿತಿನ್ | ಸಂಜೀವ ಕುಮಾರ್ | ಮನ್ನೇಕಹಳ್ಳಿ |
| ಸ್ಪೂರ್ತಿ | ಸಂತೋಷ್ ಕುಮಾರ್ | ಬೆಲ್ವಾಡಿ |
| ಸಂಗಮೇಶ್ | ವಿಜಯಕುಮಾರ್ | ಹುಮ್ನಾಬಾದ್ |
| ಪ್ರಣವ್ ಆರ್ | ರಾಜು ಎಸ್ | ಪರಶುರಾಂಪುರ |
| ಐಶ್ವರ್ಯ ಬಿ ಎಂ | ಮಹೇಶ್ ಬಿ ಎಸ್ | ಚಿನ್ನಪ್ಪನಹಳ್ಳಿ |
| ಭಾರತ್ ಡಿ ಬಿ | ಬಾಲಾಜಿ ಡಿ ಎನ್ | ಬೀರೇಶ್ವರ ನಗರ |
| ಮನು ಕೆ ಬಿ | ವಿನೋದ ಶೆಟ್ಟಿ ಟಿ ಪಿ | ಕರಿಚೆಡು |


| ವಿದ್ಯಾರ್ಥಿಯ ಹೆಸರು | ತಂದೆಯ ಹೆಸರು | ಊರು |
|---|---|---|
| ಧನುಷ್ ಡಿ ಆರ್ | ಲೇ॥ ಡಿ ಎಸ್ ರಾಘವೇಂದ್ರ | ಕೋಲಾರ |
| ಅರವಿಂದ್ ಕುಮಾರ್ ಶೆಟ್ಟಿ | ರಾಮಮೂರ್ತಿ ಶೆಟ್ಟಿ | ರಾಯಚೂರು |
| ರಾಮು ಸಿ ಆರ್ | ಲಕ್ಷ್ಮೀನಾರಾಯಣ ಶೆಟ್ಟಿ ಸಿ ಆರ್ | ರಾಯಲಪಾಡು |
| ಅಮೃತ ಬಿ ಅರ್ | ರಾಜಶೇಖರ್ ಬಿ ಎಸ್ | ರಾಘವೇಂದ್ರ ಲೇಔಟ್ |
| ಆಶಿಶ್ ಪಿ | ಕನಕಾಚಲ ಪಿ | ಚಿಕ್ಕಜಂತ್ಕಲ್ |
| ಕಾರ್ತಿಕ್ ಎನ್ | ನರಸಿಂಹರಾಜ ಎನ್ | ದಾವಣಗೆರೆ |
| ಪ್ರೀತಂ ಎಂ | ಲೇ॥ ಪ್ರಭಾಕರ ಗುಪ್ತ ಎಂ | ದೊಡ್ಡಬಳ್ಳಾಪುರ |
| ಯಶ್ವಂತ್ ಬಿ ಎನ್ | ನಾಗರಾಜ ಬಿ ಆರ್ | ಹಡ್ಕುಲ |
| ಚೈತ್ರ ಶ್ರೀ ಹೆಚ್ ಇ | ಗುರುರಾಜ್‌ಶೆಟ್ಟಿ ಹೆಚ್ ಇ | ತುರ್ವಿಹಾಳ್ |
| ಜಾನ್ವಿ | ರಾಜಕುಮಾರ್ | ಕಲ್ಬುರ್ಗಿ |
| ಚೇತನ್ ಹೆಚ್ | ನಾಗರಾಜ ಶೆಟ್ಟಿ ಹೆಚ್ | ತುರ್ವಿಹಾಳ್ |
| ಸ್ವಪ್ನ ಬಿ | ರಾಘವೆಂದ್ರ ಬಿ | ಬಾಗಲ್ವಾಡ್ |
| ಮಾಧವಿ ಬಿ | ಬದರಿನಾಥ್ ಬಿ ಕೆ | ಯೆಲ್ಲೂರು |
| ರಿಶಿತ್ ಟಿ ವಿ | ವೆಂಕಟಾಚಲಪತಿ ಶೆಟ್ಟಿ ಟಿ | ಮದ್ದೂರು |
| ಹರೀಶ್ ಕುಮಾರ್ | ನಾಗರಾಜ್ | ಬದಾರಾಲಿ |
| ಕೃಪಾ | ಯಾದಾಲಂ ರಾಂಕುಮಾರ್ | ಚಿತ್ರದುರ್ಗ |
| ಸಾಯಿರಾಂ ವಿ ಎಸ್ | ಶ್ರೀನಿವಾಸ ವಿ ಎಲ್ | ಶಿರಾ |
| ಪವನ್ ಕುಮಾರ್ ವಿ | ವಿಜಯಕುಮಾರ್ ಎ ವಿ | ಬೆಂಗಳೂರು |
| ಪ್ರಣತಿ ಕೆ ಜೆ | ಜಗನ್ನಾಥ್ ಕೆ ಎನ್ | ಕೊರಟಗೆರೆ |
| ರಕ್ಷಿತ | ರೂಪ | ಬೆಂಗಳೂರು |

**ಕಷ್ಟದಲ್ಲಿ ಇರುವವ ಕಂಡು ನಮ್ಮ ಮನಸ್ಸು ಮರುಗಿದರೆ ನಮ್ಮ ಹೆತ್ತವರು ಹೇಳುತ್ತಾರೆ...ನಮ್ಮ ಸಾರ್ಥಕ ಎಂದು ಅದೇ...ಕಷ್ಟದಲ್ಲಿ ಇರುವವರನ್ನು ಗುರುತಿಸಿ ಸಹಾಯ ಮಾಡಲು ಮುಂದಾದರೆ ಭಗವಂತನು ಹೇಳುತ್ತಾನೆ... ನನ್ನ ಸೃಷ್ಟಿ ಸಾರ್ಥಕ ಎಂದು**

## 6ನೇ ಆವೃತಿಯ ವಾಸವಿ ಎಕ್ಸಲೆನ್ಸ್ ಪ್ರಶಸ್ತಿ

ಆರ್ಯವೈಶ್ಯ ಸಮಾಜದ ಸಾಧಕ ಪ್ರತಿಭೆಗಳನ್ನು ಗುರುತಿಸಿ, ಸಾಧಕರಿಂದ ಅರ್ಜಿಗಳನ್ನು ಆಹ್ವಾನಿಸಿ, ಆಯ್ಕೆಯಾದವರಿಗೆ ಪ್ರಶಸ್ತಿಗಳನ್ನು ನೀಡುವ 2017ರಲ್ಲಿ ಮಹಾಸಭೆ ಆರಂಭಿಸಿತು. ಕರ್ನಾಟಕ ರಾಜ್ಯದ ಪ್ರತಿಷ್ಠಿತ ಸುದ್ದಿವಾಹಿನಿಗಳಲ್ಲಿ ಒಂದಾಗಿರುವ ಏಷ್ಯಾನೆಟ್ ಸುವರ್ಣ ನ್ಯೂಸ್ ಹಾಗೂ ಕನ್ನಡಪ್ರಭ ದಿನಪತ್ರಿಕೆಗಳ ಸಹಯೋಗದೊಂದಿಗೆ ನಡೆದು ಬರುತ್ತಿರುವ ಪ್ರಶಸ್ತಿ ಪ್ರಧಾನ ಸಮಾರಂಭ **ಐದನೇ** ವರ್ಷಕ್ಕೆ ಪಾದಾರ್ಪಣೆ ಮಾಡಿದ್ದು ಪ್ರಶಸ್ತಿಗಳ ಆಯ್ಕೆ ಪ್ರಕ್ರಿಯೆ ಅತ್ಯಂತ ಗೌರವ ಪೂರ್ಣವಾಗಿ ನಡೆದುಕೊಂಡು ಬಂದಿರುತ್ತದೆ ಮತ್ತು ನಮ್ಮ ಪ್ರಶಸ್ತಿಗಳು ಜನಮನದಲ್ಲಿಯೂ ಗೌರವಯುತ ಸ್ಥಾನ ಪಡೆದಿದೆಯೆಂದು ಹೇಳಲು ಅತೀವ ಸಂತೋಷವಾಗುತ್ತದೆ.

## ನಮ್ಮ ಹೆಮ್ಮೆಯ ಸಾಧಕರು



**ಆರ್ಥಿಕ ಸಹಕಾರ**



ಭೀಕರ ಮಳೆ ಅಥವಾ ಬರಗಾಲದಿಂದ ತತ್ತರಿಸಿರುವ ಸಮಾಜದ ಬಂಧುಗಳಿಗೆ ವ್ಯಾಪಾರಕ್ಕೆ, ಕಳೆದುಕೊಂಡ ಮನೆಗಳ ನಿರ್ಮಾಣಕ್ಕೆ ಆರ್ಥಿಕ ಸಹಕಾರವನ್ನು ನೀಡಿ ಪುನಃ ಅವರು ಜೀವನ ಕಟ್ಟಿಕೊಳ್ಳಲು ಸಹಾಯವಾಗುವಂತಹ ಶ್ರೇಷ್ಠ ಕಾರ್ಯ. 200ಕ್ಕೂ ಹೆಚ್ಚು ಕುಟುಂಬಗಳ ಪುನರುಜ್ಜೀವನಕ್ಕೆ ಸಹಕಾರ ನೀಡಲಾಗಿದೆ.



## ಆರೋಗ್ಯ ಸೇವೆ

ಕೆಲವೊಂದು ಸಾಂಕ್ರಾಮಿಕ ಮಾರಣಾಂತಿಕ ಕಾಯಿಲೆಗಳು ಬಂದಾಗ ಇಂದಿನ ಆರೋಗ್ಯ ಕ್ಷೇತ್ರದಲ್ಲಿ ಮಧ್ಯಮ ಹಾಗೂ ಕೆಳವರ್ಗದ ನಾಗರೀಕರಿಗೆ ಆರೋಗ್ಯ ಸೇವೆಗೆ ಸಹಕಾರ – **ಆರೋಗ್ಯ ಭಾಗ್ಯ**

**ವೈಶ್ಯಾಂತರಂಗ**



ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಕಾರ್ಯಕ್ರಮಗಳನ್ನು ಆಗಿಂದ್ದಾಗ್ಗೇ, ಸಾಮಾಜಿಕ ಜಾಲತಾಣಗಳ ಮೂಲಕ ಕುಲಭಾಂದವರಿಗೆ ತಲುಪಿಸಲು ಇರುವ ಮಾಧ್ಯಮ ವಿಭಾಗ. ಈ ಮೂಲಕ ಮಹಾಸಭೆ, ಸಮಾಜದ ಪ್ರಮುಖ ಕಾರ್ಯಗಳು ಇತ್ಯಾದಿಗಳನ್ನು ಕೇವಲ 45 ನಿಮಿಷಗಳಲ್ಲಿ ಒಂದು ಲಕ್ಷಕ್ಕೂ ಮೀರಿದ ಕುಲಬಾಂಧವರಿಗೆ ಮಿಂಚಿನ ವೇಗದಲ್ಲಿ ತಲುಪಿಸುತ್ತಿರುವ ವಿದ್ಯುನ್ಮಾನ ವಿಭಾಗ 5ನೇ ವರ್ಷದಿಂದ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.

## ಅಮರಜ್ಯೋತಿ ಯೋಜನೆ

ಮಹಾಸಭೆಯ ವೈಶಿಷ್ಟ್ಯ ಪೂರ್ಣ ಯೋಜನೆಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿರುವ, ಸಾವಿನಿಂದ ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬಳಿಗೆ ನವಚೇತನ ನೀಡುವ ಹೃದಯಸ್ಪರ್ಶಿ ಯೋಜನೆ **ಅಮರಜ್ಯೋತಿ ಯೋಜನೆ.**

2019ರಲ್ಲಿ ಪ್ರಾರಂಭವಾದ ಈ ಯೋಜನೆಯ ಮೂಲಕ ಸರಿ ಸುಮಾರು 5000 ಸದಸ್ಯರಿದ್ದು ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ನಾನಾ ಕಾರಣಗಳಿಂದ ಸದಸ್ಯರ ಸಂಖ್ಯೆ ಇಳಿಮುಖವಾದರೂ, ಈ ಯೋಜನೆಯು ಫಲ ಕೊಡುವ ವೃಕ್ಷವೆಂದು ತಿಳಿದು ಬಂದ ನಂತರ ಪುನಃ ಸದಸ್ಯರ ಸಂಖ್ಯೆ ಏರಿಕೆಯಾಗಿ ಪ್ರಸ್ತುತ **7382**ಕ್ಕೂ ಮೀರಿದ ಸದಸ್ಯರು ಯೋಜನೆಗೆ ಕೈಜೋಡಿಸಿದ್ದಾರೆ. ಈ ಯೋಜನೆಯು ಜೀವ ವಿಮೆಯಂತೆ ಕಾರ್ಯನಿರ್ವಹಿಸುತ್ತಿದ್ದು ಇದುವರೆವಿಗೂ **107** ಸದಸ್ಯರ ನಿಧನದಿಂದ ಅವರ ಕುಟುಂಬಗಳಿಗೆ ರೂ. **3,18,69,800/–** ಗಳಷ್ಟು ಆರ್ಥಿಕ ಸಹಕಾರ ನೀಡಲಾಗಿದೆ.





# ಶ್ರೀ ವಾಸವಿ ಗೋಶಾಲೆ

ಹಳೆ ಪೋಸ್ಟ್ ಆಫೀಸ್ ರಸ್ತೆ , ಬ್ರಾಹ್ಮಣರ ಬೀದಿ, ಹುಣಸೂರು

# ಗೋದಾನಿಗಳಿಗೆ ಸುವರ್ಣ ಅವಕಾಶ



ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಆಶ್ರಯದಲ್ಲಿ ಮೈಸೂರು ಜಿಲ್ಲೆ ಹುಣಸೂರು ನಗರದಲ್ಲಿ ನವೆಂಬರ್ 14 2021 ರಂದು ಪ್ರಾರಂಭವಾದ **ಶ್ರೀ ವಾಸವಿ ಗೋಶಾಲೆ** ಹಸು ಮತ್ತು ಕರುಗಳಿಂದ ಕಂಗೊಳಿಸುತ್ತಿದೆ.

**ಒಂದು ಗೋವನ್ನು ದಾನ ಮಾಡಿದರೆ ಕೋಟಿ ದೇವಾಲಯ ಕಟ್ಟಿದ ಫಲ,** ಒಂದು ಗೋವನ್ನು ರಕ್ಷಿಸಿದರೆ ಲಕ್ಷ ಯಜ್ಞಗಳ ಫಲ, ಒಂದು ಗೋಶಾಲೆ ಕಟ್ಟಿಸಿದರೆ ಸಾಕ್ಷಾತ್ ಜಗನ್ಮಾತೆಯ ಆಲಯ ಕಟ್ಟಿದ ಫಲ, ಗೋಮಯ, ಗೋಮೂತ್ರದಿಂದ ಮಾಡಿದ ವ್ಯವಸಾಯ ದೇಶದ ಪ್ರಗತಿಗೆ ಫಲಪ್ರದ, ಒಂದು ಗೋವಿಗೆ ಆಹಾರ ನೀಡಿದರೆ ಮುಕ್ಕೋಟಿ ದೇವರಿಗೆ ನೈವೇದ್ಯ ನೀಡುವ ಫಲ.

**ಗೋದಾನ ಮಾಡಿ ಗೋದಾನಿಗಳಾಗಿ ಅಥವಾ ಗೋಸೇವೆಗೆ ಸಹಕರಿಸಿ**

---

## ಶ್ರೀ ವಾಸವಿ ವಾನಪ್ರಸ್ಥಾಶ್ರಮ (ವೃದ್ಧಾಶ್ರಮ) ಮತ್ತು ಅನಾಥ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ವಾಸವಿ ಕರುಣಾಶ್ರಯ

ಹಳೆ ಪೋಸ್ಟ್ ಆಫೀಸ್ ರಸ್ತೆ , ಬ್ರಾಹ್ಮಣರ ಬೀದಿ, ಹುಣಸೂರು



**ಮೈಸೂರು** ನಗರದಿಂದ ಕೇವಲ 40 ನಿಮಿಷಗಳ ದೂರದಲ್ಲಿರುವ ಹುಣಸೂರು ನಗರದ ಹೃದಯ ಭಾಗದಲ್ಲಿ ಪ್ರಕೃತಿಯ ಸಸ್ಯ ಸಿರಿಯ ನಡುವೆ ತಲೆ ಎತ್ತಿ ನಿಂತಿದೆ **ಶ್ರೀ ವಾಸವಿ ವಾನಪ್ರಸ್ಥಾಶ್ರಮ ಮತ್ತು ವಾಸವಿ ಕರುಣಾಶ್ರಯ.**

60 ರಿಂದ 75 ವರ್ಷ ವಯೋಮಿತಿಯ ಆರೋಗ್ಯವಂತ ಪುರುಷರು ಹಾಗು ಮಹಿಳೆಯರು ವೃದ್ಧಾಶ್ರಮ ಸೇರಿಕೊಳ್ಳಲು ಮುಕ್ತವಾದ ಅವಕಾಶವಿದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಜೀವನದ ಸಂಧ್ಯಾ ಕಾಲವನ್ನು ಶಾಂತಿ ನೆಮ್ಮದಿಗಳಿಂದ ಕಳೆಯಲು ಇದೊಂದು ಪ್ರಶಸ್ತವಾದ ತಾಣ ಆಸಕ್ತರು, ತಿಳಿದವರು ವೃದ್ಧಾಶ್ರಮದಲ್ಲಿ ಆಶ್ರಯಕ್ಕಾಗಿ, **ಪೋಷಕರನ್ನು** ಕಳೆದುಕೊಂಡು ಭವಿಷ್ಯವನ್ನು ಕಾಣದ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ನಿರ್ಮಿಸುವ ನಿಟ್ಟಿನಲ್ಲಿ ಮಹಾಸಭೆಯ ವಾಸವಿ ಕರುಣಾಶ್ರಯ ಕಾರ್ಯನಿರ್ವಹಿಸುತ್ತಿದೆ. ಹುಣಸೂರು ನಗರದ ಹೃದಯ ಭಾಗದಲ್ಲಿ 4.5 ಎಕರೆ ವಿಸ್ತಾರವಾದ ಪ್ರದೇಶದಲ್ಲಿ ತಲೆಎತ್ತಿ ನಿಂತಿರುವ ವಾಸವಿ ಕರುಣಾಶ್ರಯ ಅನಾಥ ಮಕ್ಕಳಿಗೆ ಉತ್ತಮ ಭವಿಷ್ಯ ನೀಡುವ ಆಲಯವಾಗಿದೆ.

---




## ವಾಸವಿ ಅಕಾಡೆಮಿ

ಸಮಾಜದ ಆಸಕ್ತ ವಿದ್ಯಾಮಾಣಿಕ್ಯಗಳನ್ನು ಗುರುತಿಸಿ ಅವರಿಗೆ ಕೇಂದ್ರ/ರಾಜ್ಯದ ಲೋಕ ಸೇವಾ ಆಯೋಗದ ಪರೀಕ್ಷೆಗಳನ್ನು ಎದುರಿಸುವ ಶೈಕ್ಷಣಿಕ ಸಾಮರ್ಥ್ಯವನ್ನು ತುಂಬಿ ಮುಂದಿನ ದಿನಗಳಲ್ಲಿ ನಮ್ಮ ರಾಜ್ಯದ ಐ.ಎ.ಎಸ್, ಐ.ಪಿ.ಎಸ್, ಐ.ಆರ್.ಎಸ್, ಕೆ.ಎ.ಎಸ್, ಇತ್ಯಾದಿ ಆಡಳಿತಾತ್ಮಕ ಅಧಿಕಾರಿಗಳನ್ನು ದೇಶ ಸೇವೆಗಾಗಿ ನೀಡುವಂತಹ ಸವಾಲಿನ ಕಾರ್ಯವನ್ನು ಕೈಗೆತ್ತಿಕೊಂಡ ಜನತೆಯ ವಿಶ್ವಾಸರ್ಹತೆಯ ಯೋಜನೆ **ವಾಸವಿ ಅಕಾಡೆಮಿ.** ಈ ವರ್ಷದಿಂದ ಪ್ರತಿಷ್ಠಿತ ಅಕಾಡೆಮಿಗಳಲ್ಲಿ ಒಂದಾದ **ಧೀ ಅಕಾಡೆಮಿ** ಸಂಸ್ಥೆಯೊಂದಿಗೆ ಕಾರ್ಯನಿರ್ವಹಿಸುತ್ತಿದೆ.

## ಸೋಂಪುರ ರೂರಲ್ ಎಜುಕೇಶನ್ ಸೊಸೈಟಿ

ಬೆಂಗಳೂರು ಗ್ರಾಮಾಂತರ ನೆಲಮಂಗಲ ತಾಲ್ಲೋಕಿನ ಡಾಬಸ್ ಪೇಟೆಯಲ್ಲಿ ಸಮಾಜದ ಬಂಧುಗಳಿಂದ 1962ರಲ್ಲಿ ಪ್ರಾರಂಭವಾಗಿದ್ದ ಸೋಂಪುರ ರೂರಲ್ ಎಜುಕೇಶನ್ ಸೊಸೈಟಿ ಮತ್ತು ಅದರ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿ ವಿ ಜಿ ಪ್ರೌಢಶಾಲೆ ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಪೂರ್ಣ ನಿರ್ವಹಣೆಯನ್ನು ದಿನಾಂಕ 12/09/2021ರಿಂದ ಕರ್ನಾಟಕ ಆರ್ಯವೈಶ್ಯ ಮಹಾಸಭೆಗೆ ವಹಿಸಿಕೊಟ್ಟಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ.

# ವಾಸವಿ ಇ-ಸೇವಾ ತಂತ್ರಜ್ಞಾನದ ಮೈಲಿಗಲ್ಲು



**ವಿ**ಶ್ವದ ಯಾವುದೇ ಭಾಗದಿಂದಲ್ಲಾದರೂ ನಿಗಧಿತ ಸಮಯದಲ್ಲಿ ಕರ್ನಾಟಕ ರಾಜ್ಯದ 301 ವಾಸವಿ ದೇವಾಲಯಗಳ ಪೈಕಿ ನಾವು ಇಚ್ಛೆಪಟ್ಟ ದೇವಾಲಯದಲ್ಲಿ ಸೇವೆ ಸಲ್ಲಿಸ ಬಹುದಾಗಿರುವ ನೂತನ ತಂತ್ರಜ್ಞಾನದ ವೈಶಿಷ್ಟ್ಯ ಪೂರ್ಣ ಪೋರ್ಟಲ್.

**ಭಕ್ತಾದಿಗಳು, ಅಭಿಷೇಕ, ವಿಶೇಷ ಪೂಜೆಗಳನ್ನು ನೇರವಾಗಿ ವೀಕ್ಷಿಸಲು, ಸೇವಾ ಸಂಕಲ್ಪ ಸ್ವೀಕರಿಸಲು, ಮಂಗಳಾರತಿಯನ್ನು ಪಡೆಯಲು, ಮಂಗಳಾರತಿಗೆ ಕಾಣಿಕೆ ಸಲ್ಲಿಸಲು, ಸಾಧ್ಯವಿರುವಂತಹ ಆಧುನಿಕ ತಂತ್ರಜ್ಞಾನದ ಪೋರ್ಟಲ್.**

## ವಾಸವಿ ದೇವಾಲಯಗಳ ಆಡಳಿತ ಮಂಡಳಿಯವರಿಂದ ಕೋರುವ ಸಹಕಾರ

1. ರಾಜ್ಯದ ಯಾವುದೇ ಭಾಗದಲ್ಲಿರುವ ವಾಸವಿ ದೇವಾಲಯದ ಆಡಳಿತ ಮಂಡಳಿಯವರು ಸುಮಾರು **ರೂ.** 13,000-00 (ಹದಿಮೂರು ಸಾವಿರ) ವೆಚ್ಚದ ತಾಂತ್ರಿಕ ಉಪಕರಣಗಳನ್ನು ತಮ್ಮ ದೇವಾಲಯದಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ. ದಯವಿಟ್ಟು ಪ್ರತಿಯೊಂದು ಶ್ರೀ ವಾಸವಿ ದೇವಾಲಯದ ಆಡಳಿತ ಮಂಡಳಿಯವರು ಕಡ್ಡಾಯವಾಗಿ ಈ ನಿಟ್ಟಿನಲ್ಲಿ ಸಹಕರಿಸಲು ವಿನಂತಿ.

2. ತಮ್ಮ ದೇವಾಯದ ಎಲ್ಲಾ ಸೇವೆಗಳನ್ನು ಪೋರ್ಟಲ್ (Portal)ನ ಮೂಲಕ ವಿಶ್ವದ ಯಾವುದೇ ಭಾಗದಲ್ಲಿರುವ ಭಕ್ತಾದಿಗಳಿಗೆ ತಿಳಿಸಲು, ಆಗಿಂದಾಗ್ಗೆ ಬದಲಾಯಿಸಿಕೊಳ್ಳಲು ಸಂಪೂರ್ಣವಾದ ಸ್ವಾಮ್ಯ ಆಯಾ ದೇವಾಲಯಗಳಿಗೆ ಇರುತ್ತದೆ.

3 ಯಾವುದೇ ರೀತಿಯ ಆರ್ಥಿಕವಾದ ಹೊರೆ ದೇವಾಲಯಗಳಿಗೆ ಇರುವುದಿಲ್ಲ.

4. ನಿಮ್ಮ ಯಾವುದೇ ಆರ್ಥಿಕ ಮಾಹಿತಿಗಳನ್ನು ಮಹಾಸಭೆಗಾಗಲಿ ಅಥವಾ ಇನ್ನಾವುದೇ ಸಂಸ್ಥೆಗೆ ನೀಡುವ ಅವಶ್ಯಕತೆ ಇರುವುದಿಲ್ಲ.

5. ಇದರಿಂದ: ಭವಿಷ್ಯದಲ್ಲಿ ದೇವಾಲಯಗಳ ಆರ್ಥಿಕ ಸ್ಥಿತಿ ಉತ್ತಮವಾಗುತ್ತದೆ.

6. ನಮ್ಮ ನಮ್ಮ ಊರಿನಲ್ಲಿ ಹುಟ್ಟಿ ಬೆಳೆದ ಯಾವುದೇ ಭಕ್ತಾದಿಗಳು ಪ್ರಪಂಚದ ಯಾವುದೇ ಭಾಗದಲ್ಲಿದ್ದರು ದೇವಾಲಯಗಳೊಂದಿಗೆ ಮತ್ತು ಆಡಳಿತ ಮಂಡಳಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ದೇವಾಲಯಗಳ ಅಭಿವೃದ್ಧಿಗೆ ಸಹಕಾರವಾಗುವ ಸಾಧ್ಯತೆಗಳಿವೆ. ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆ ರಾಜ್ಯದ್ಯಂತ ಇರುವ ಶ್ರೀ ವಾಸವಿ ದೇವಾಲಯಗಳು ಮಾಹಿತಿ ಸಂಗ್ರಹಿಸಿಕೊಟ್ಟು ವಾಸವಿ ಈ ಸೇವಾ ಯೋಜನೆ ಯಶಸ್ವಿಗೆ ಕೈಜೋಡಿಸುವುದಾಗಿ ಭರವಸೆ ನೀಡಿರುತ್ತಾರೆ.

---

**ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿದರೆ ಯಶಸ್ಸು ಗ್ಯಾರಂಟಿ**

**ತಾವು ಬೇಕು ಅಂತ ಅನಿಸಬೇಕು ಆವಾಗಲೇ ಬದುಕಿಗೆ ಒಂದು ಸಾರ್ಥಕತೆ ಸಿಗೋದು ದೇಹಕ್ಕೆ ನೋವಾದರೆ ಸಹಿಸಿಕೊಳ್ಳಬಹುದು, ಆದರೆ ಮನಸ್ಸಿಗೆ ನೋವಾದಾಗ ಅದನ್ನು ಅನುಭವಿಸಿದವರಿಗೆ ಮಾತ್ರ ಆ ನೋವು ಗೊತ್ತಾಗುತ್ತದೆ.**

# ಉದ್ಯೋಗಮಿತ್ರ- ಸಾಧನೆಯ ಮೈಲಿಗಲ್ಲು

**ಗು**ಪ್ತ ಎಜುಕೇಶನ್ ಸೊಸೈಟಿ, ಬೆಂಗಳೂರುರವರ ಸಹಯೋಗದೊಂದಿಗೆ 2024ರ ಏಪ್ರಿಲ್ ತಿಂಗಳಲ್ಲಿ ಪ್ರಾರಂಭವಾದ ಉದ್ಯೋಗಮಿತ್ರ ಯೋಜನೆ ತನ್ನ ಮೂರು ತಂಡಗಳ ತರಬೇತಿಯನ್ನು ಅತ್ಯಂತ ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆ ಅತ್ಯಂತ ವೈಶಿಷ್ಟ್ಯಪೂರ್ಣವಾದದ್ದು ಪಿ.ಯು.ಸಿ ಹಾಗೂ ನಂತರದ ಶಿಕ್ಷಣವನ್ನು ಮುಂದುವರೆಸಲು ಆಗದೆ ಮಧ್ಯದಲ್ಲಿಯೇ ಕಾಲೇಜು ಶಿಕ್ಷಣದಿಂದ ಹೊರ ಬಂದಿರುವ ವಿದ್ಯಾರ್ಥಿಗಳಿಗೆ ಬೆಂಗಳೂರು ನಗರದಲ್ಲಿ ನಾಲ್ಕು ತಿಂಗಳ ಕಾಲ **Graphic Design ವಿಷಯದಲ್ಲಿ ತರಬೇತಿ ನೀಡಿ, ನಂತರ ಅವರಿಗೆ ಉತ್ತಮ ಕಂಪನಿಗಳಲ್ಲಿ ಉದ್ಯೋಗ ಕೊಡಿಸುವ ಮೂಲಕ ಆರ್ಥಿಕ ಸಂಕಷ್ಟದಲ್ಲಿರುವ ಯುವಜನತೆಯ ಭವಿಷ್ಯಕ್ಕೆ ಬೆಳಕು ನೀಡಿದ ಮಹತ್ವ ಪೂರ್ಣ ಯೋಜನೆ**. ಇದರಲ್ಲಿ ಆಯ್ಕೆ ಆದ ವಿದ್ಯಾರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಶಿಕ್ಷಣ, ಊಟ, ವಸತಿ ಎಲ್ಲವನ್ನು ಉಚಿತವಾಗಿ, ವಾಸವಿ ವೇದ ನಿಧಿ ಟ್ರಸ್ಟ್‌ನ ಆಡಳಿತ ಮಂಡಳಿ ಮಾಡಿಕೊಡುತ್ತಿರುವುದು ಯೋಜನೆಗೆ ದೊಡ್ಡ ಶಕ್ತಿ ಬಂದಂತಾಗಿದೆ. **ಜೊತೆಗೆ ಉದ್ಯೋಗ ಖಚಿತ**. ಪ್ರಸ್ತುತ ಐದನೇ ತಂಡದ ವಿದ್ಯಾರ್ಥಿಗಳ ತರಬೇತಿ ಅವಧಿ ಮುಕ್ತಾಯವಾಗಿದ್ದು ಆರನೇ ತಂಡಕ್ಕೆ ವಿದ್ಯಾರ್ಥಿಗಳ ಆಯ್ಕೆ ನಡೆದಿದೆ.



ಉದ್ಯೋಗ ಮಿತ್ರ 5ನೇ ಬ್ಯಾಚ್‌ನಲ್ಲಿ ತರಬೇತಿ ಮತ್ತು ಉದ್ಯೋಗ ಪಡೆದವರು ಆಡಳಿತ ಮಂಡಳಿ ಸದಸ್ಯರೊಂದಿಗೆ

ಮಹಾಸಭೆಯ ಉದ್ಯೋಗಮಿತ್ರ ಯೋಜನೆಗೆ ಕೈಜೋಡಿಸಿ, ನೂರಾರು ಯುವಜನರ ಕಷ್ಟಗಳಿಗೆ ಸ್ಪಂದಿಸಿ, ಕತ್ತಲಿನಲ್ಲಿದ್ದ ಭವಿಷ್ಯವನ್ನು ಬೆಳಕಿಗೆ ತಂದು, ಸ್ವಾಭಿಮಾನದ ಬದುಕನ್ನು ಕಟ್ಟಿಕೊಟ್ಟ ಯೋಜನೆಯ ಯಶಸ್ಸಿನ ರೂವಾರಿಗಳಾದ ಗುಪ್ತ ಎಜುಕೇಶನ್ ಸೊಸೈಟಿಯ ಆಡಳಿತ ವರ್ಗದ ಶ್ರೀಯುತ ಶ್ಯಾಮ್ ಸುಂದರ್ ಗುಪ್ತ ಮತ್ತು ಶ್ರೀಮತಿ ಇಂದಿರಾ ಗುಪ್ತರವರ ಸಹಕಾರ ಅವಿಸ್ಮರಣೀಯ. ಇವರ ಸೇವೆಯನ್ನು ಮಹಾಸಭೆ ಶ್ಲಾಘಿಸುತ್ತದೆ ಮತ್ತು ಅಭಿನಂದಿಸುತ್ತದೆ.

## ಮಹಿಳಾ ಸಬಲೀಕರಣ ಕಾರ್ಯಕ್ರಮ



ಆರ್ಯವೈಶ್ಯ ಸಮಾಜದ ಆಸಕ್ತ ಮಹಿಳೆಯರನ್ನು ಸಾಮಾಜಿಕವಾಗಿ ಆರ್ಥಿಕವಾಗಿ ಕ್ರಿಯಾಶೀಲರನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಪ್ರಾರಂಭವಾದ ಮಹಿಳಾ ಸಬಲೀಕರಣ ಘಟಕ ವತಿಯಿಂದ ದಿನಾಂಕ: 03/01/2025ರ ಶುಕ್ರವಾರ ಶ್ರೀಮತಿ ಪ್ರೀತಿರವರ ಮಾರ್ಗದರ್ಶನದಲ್ಲಿ ಕೇಕ್ ತಯಾರಿಕೆಗಳನ್ನು ಕಲಿಸಿಕೊಡಲಾಯಿತು



ದಿನಾಂಕ: 28/01/2025ರ ಮಂಗಳವಾರ ಕಲಬುರ್ಗಿ ನಗರದ ಶ್ರೀನಗರೇಶ್ವರ ದೇವಾಲಯ ಆವರಣದಲ್ಲಿ ಶ್ರೀಮತಿ ಗೀತಾರವರ ನೇತೃತ್ವದಲ್ಲಿ ಸುಮಾರು 150 ಮಹಿಳೆಯರಿಗೆ ವಿವಿಧ ರೀತಿಯ ಕೇಶ ಶೃಂಗಾರ ಮತ್ತು ಕೇಶವರ್ಣಗಳ ವಿಶೇಷ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು

# ಸಾಮಾಜಿಕ ಜಾಲತಾಣದಲ್ಲಿ ನಮ್ಮ ಸಾಧಕರು

ಇದು ಡಿಜಿಟಲ್ ಯುಗ, ಯಾರಿಗೂ ಏನು ಬೇಕಾದರು, ನೋಡಬೇಕಾದರು, ತಿಳಿದುಕೊಳ್ಳಬೇಕಾದರೂ... ಸಾಮಾಜಿಕ ಜಾಲತಾಣಗಳನ್ನು ಮೋರೆ ಹೋಗುವುದು ಸರ್ವೇ ಸಾಮಾನ್ಯ. ನಮ್ಮ ಸಮಾಜದ ನೂರಾರು ಸಂಖ್ಯೆಯ ಯುವಜನರು  ಯುಟ್ಯೂಬ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್, LinkedIn, ಇತ್ಯಾದಿ ಸಾಮಾಜಿಕ ಜಾಲತಾಣದಲ್ಲಿ ತಮ್ಮದೇ ಆದ ಚಾನೆಲ್‌ಗಳನ್ನು ಹೊಂದಿದ್ದು. ಆರ್ಥಿಕ ಮಾಹಿತಿಗಳು, ವಿವಿಧ ಬಗೆಯ ಅಡುಗೆ ವಿಧಾನಗಳು, ಇಂತಹ ಹತ್ತು  ಹಲವು ವಿಷಯಗಳ ಬಗ್ಗೆ ಚಾನೆಲ್‌ಗಳಲ್ಲಿ ಮಾಹಿತಿಗಳನ್ನು ಹಂಚಿಕೊಳ್ಳುತ್ತಾ ಲಕ್ಷ-ಲಕ್ಷ ಸಂಖ್ಯೆಯ ಫಾಲೋವರ್ಸ್‌ಗಳನ್ನು ಹೊಂದಿರುವುದು ಹುಬ್ಬೇರಿಸುವಂತಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಐವತ್ತುಸಾವಿರಕ್ಕೂ ಮೀರಿದ ಫಾಲೋವರ್ಸ್‌ಗಳನ್ನು ಹೊಂದಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಮಹಾಸಭೆಗೆ ಬಂದಿದ್ದ 49 ಅರ್ಜಿಗಳನ್ನು ಪರಿಶೀಲಿಸಿ, ಆ ಪೈಕಿ ಮಹಾಸಭೆ ಈ ಕೆಳಗೆ ತಿಳಿಸಿರುವ 19ಜನ ಸಾಧಕರನ್ನು ಆಯ್ಕೆ ಮಾಡಿತು.

**ನವೀನ್ ಸುರೇಶ್, ಪಿಎನ್ ನಿಖಿಲ್, ಸಂಕೀರ್ತ್ ಕೃಷ್ಣ, ಆಶಿಕ್ ಪಾಳ್ಯಂ, ಲಕ್ಷ್ಮೀಹರ್ಷವರ್ಧನ, ಕಟ್ಟಾ ತನುಜಾ, ಸುಜಿತಾ ಜಿ ಬಿ, ಜಾಹ್ನವಿ ಜಿ.ಆರ್, ವಿಜಯಶ್ರೀ. ಪಿ, ಸುಬ್ರಹ್ಮಣ್ಯ, ಶ್ರೀಮತಿ ಸುಧಾ ಬಿ.ಆರ್. ಮತ್ತು ಶ್ರೀ ಸಂದೀಪ್ ಮಂಜುನಾಥ್,  ಶಿವಶಂಕರ ಕೆ, ಸತೀಶ್ ಕುಮಾರ್ ಹೆಚ್, ಜೆ ಬಿ ಶಶಾಂಕ್, ಕುನಾಲ್ ಬೈಸಾನಿ, ಡಾ. ಸುಮುಖ್ ಎಸ್.ಜಿ, ಚಂದ್ರಲೇಖಾ ಮಿತ್ತೇಮರಿ ರವಿಕುಮಾರ್, ವಿ ನಂದೀಶ ಶೆಟ್ಟಿ, ಮಂಜುಳಾ ವೈ**



